ಕೇವಲ 8 ಕೋಟಿ ಕೊಟ್ಟಿದ್ದೀರಿ. ಆದ್ದರಿಂದ ಇದನ್ನು ಕೆಣಕುವುದು ಬೇಡ. ನಮ್ಮ ಕಡೆ ಕೆಣಕಿ ಕ್ಯಾರ್‌ನಲ್ಲಿ ಹಾಕಿಕೊಳ್ಳಬಾರದು ಎಂದು ಹೇಳುತ್ತಾರೆ. ಹಾಕಿದರೆ ಮೈತುಂಬ ಹುಣ್ಣಾಗುತ್ತದಂತೆ. ಆ ರೀತಿ ಮಾಡಿಕೊಳ್ಳಲು ಹೋಗಬೇಡಿ. ತಪ್ಪಾಗಿದ್ದರೆ ಸರಿಪಡಿಸಿ. ಆ ದಿವಸ 500 ಕೋಟಿಯ ಡ್ರಾಫ್ಟ್ ಕೊಡುತ್ತೇನೆ. ತೆಗೆದುಕೊಂಡು ಹೋಗಿ ಎಂದು ಹೇಳಿದ್ದೀರಿ. ಇಲ್ಲಿ 50 ಕೋಟಿ ಕೇಳಿದ್ದರೆ 17 ಕೋಟಿ ಕೊಡುತ್ತೇನೆಂದು ಅದನ್ನೂ ಕೊಡಲಿಲ್ಲ. ಆದ್ದರಿಂದ ಇನ್ನೂ ಮೇಲಾದರೂ ಸಂಬಂಧಪಟ್ಟವರನ್ನು ಕರೆಸಿ ಮಾರ್ಕೆಟಿಂಗ್ ಫೆಡರೇಷನ್‌ರವರನ್ನು ಕರೆಯಿಸಿ. ಕೃಷಿ ಸಚಿವರು ಮತ್ತು ಕಾರ್ಯದರ್ಶಿಯವರನ್ನು ಕೂರಿಸಿ ಬಗೆಹರಿಸಿ ಎಂದು ಹೇಳಿ. ಅನೇಕ ಸಾರಿ ನಿಮ್ಮ ಗಮನಕ್ಕೂ ಬಾರದಿರಬಹುದು ಅಥವಾ ನೀವು busy ಇದ್ದಲ್ಲಿ ತೆಗೆದುಕೊಳ್ಳದೇ ಇರಬಹುದು. ಆದರೆ. ಸಂಬಂಧಪಟ್ಟ ಇಲಾಖೆಯವರು ಏನು ಮಾಡುತ್ತಾರೆ? they should do it.

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ನಿಮಿಷ ತಾಳಿ. ನನಗೆ ಆ ಪತ್ರದ ಪ್ರತಿಯನ್ನಾದರೂ ಕಳುಹಿಸಿ ಕೊಡಿ. ಆ ಪತ್ರದ ಪ್ರತಿ ಕಳುಹಿಸಿ ಕೊಡದೇ ನೀವು ಹೀಗೆ ಮಾತನಾಡಿದರೆ ಹೇಗೆ? ನನಗೆ ಅದರ ಪ್ರತಿ ಕಳುಹಿಸಿ ಕೊಡಿ.

ಅಧ್ಯಕ್ಷರು ; ಅದರ ಪ್ರತಿ ಕಳುಹಿಸಿ ಕೊಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನಾನು ಒಂದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ದಿನಾಂಕ 8–7–08 ರಲ್ಲಿ 17 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರ ಆದೇಶ ಮಾಡಿದೆಯೋ ಇಲ್ಲವೋ? ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು. ಅದರಲ್ಲಿ ಸಹಕಾರ ಮಾರಾಟ ಮಹಾ ಮಂಡಲಕ್ಕೆ ಒಂದು ಕಾಸನ್ನೂ ಬಿಡುಗಡೆ ಮಾಡಿಲ್ಲ. ಈ ರೀತಿಯಾಗಿ ಅಧಿಕಾರಿಗಳು ತಪ್ಪು ಮಾಹಿತಿ ಸದನಕ್ಕೆ ಕೊಟ್ಟು ಸದನವನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಅವಕಾಶ ಮಾಡಿಕೊಡಬಾರದೆಂದು ನಾನು ವಿನಂತಿಸುತ್ತೇನೆ ಮತ್ತು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಈ ಪತ್ರವನ್ನು ಕಳುಹಿಸಿ ಕೊಡುತ್ತಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಸಹಕಾರಿ ಮಾರಾಟ ಮಹಾ ಮಂಡಲದ ಅಧಿಕಾರಿಯನ್ನು ಇವತ್ತು ಮಧ್ಯಾಹ್ನ ಕರೆಸುತ್ತೇನೆ. ರಸಗೊಬ್ಬರ ಎಲ್ಲಿಯಾದರೂ ಕೊಡಿಸುತ್ತೇವೆಂದು ಹೇಳಿದರೆ ಇವತ್ತೇ ನಾನು ಅವರಿಗೆ 250 ಕೋಟಿ ರೂಪಾಯಿಯ ಡ್ರಾಫ್ಟ್ ಕೊಡುವುದಕ್ಕೆ ನಾನು ಸಿದ್ದನಿದ್ದೇನೆ. ಒಬ್ಬ ಮುಖ್ಯಮಂತ್ರಿಯಾಗಿ ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಹೋದ ಸಾರಿ ಚರ್ಚೆಯಾಗುವ ಸಂದರ್ಭದಲ್ಲಿ 500

ಕೋಟಿ ಕೊಡುತ್ತೇನೆಂದು ಇಲ್ಲಿ ಹೇಳಿದ್ದು ನಿಜ. ನಾವು ಇಲ್ಲವೆಂದು ಹೇಳುತ್ತಿಲ್ಲ. ಆದರೆ. ಕಳೆದ ಒಂದು ವಾರದಿಂದಲೂ ಸಂಪರ್ಕ ಮಾಡುತ್ತಿರಬೇಕಾದರೆ. ಯಾವುದೇ ಕಾರಣಕ್ಕೂ ನಿಮ್ಮ marketing Federations ಮೂಲಕ ನೀವು ಗೊಬ್ಬರ ತರಿಸಿಕೊಳ್ಳುವುದಕ್ಕೆ ಬರುವುದಿಲ್ಲ. ನಾವು ಕೊಡುವುದಿಲ್ಲ. ನಾವೇನು ನಮ್ಮ ಕಡೆಯಿಂದ supply ಮಾಡುತ್ತಿದ್ದೇವೆ. ಇದು ಮಾತ್ರ ಸಾಧ್ಯವೆಂದು ಸ್ಪಷ್ಟವಾಗಿ Fertilizer Minister ರವರು ಅಧಿಕಾರಿಗಳ ಜೊತೆ ಮಾತನಾಡುವಂಥ ಕಾಲದಲ್ಲಿ ನಮಗೆ ಹೇಳಿದ್ದಾರೆ. ಇವತ್ತು ನೀವು ಬನ್ನಿ.. Marketing Federations ಅಧಿಕಾರಿಗಳನ್ನು ಕರೆದಾಗ ನಿಮ್ಮನ್ನೂ ಕರೆಯುತ್ತೇನೆ. ಏಕೆಂದರೆ. ಈ ಸಮಸ್ಯೆ ಯಾರೋ ಒಂದು ಪಕ್ಷದ್ದಲ್ಲ. ಇಡೀ ರಾಜ್ಯದ ರೈತನ ಪ್ರಶ್ನೆ. ಅದಕ್ಕೆ ನೆರವು ಕೊಡುವುದು ನಮ್ಮ ಕರ್ತವ್ಯ. ರೈತನಿಗೆ ಏನೇನು ನೆರವು ಕೊಡುವುದಕ್ಕೆ ಸಾಧ್ಯವಿದೆಯೋ ಬಹುಶಃ ಸ್ವಾತಂತ್ರ್ಯ ಬಂದ ಮೇಲೆ ಈ ದೇಶದ ಯಾವುದೇ ರಾಜ್ಯದಲ್ಲಿ ಯಾರೂ ಮಾಡಲಾರದಷ್ಟು ಸವಲತ್ತನ್ನು ಶಕ್ತಿಮೀರಿ ಪ್ರಾಮಾಣಿಕವಾಗಿ ನಾನು ಮಾಡಿದ್ದೇನೆ. ನಾನು ಪ್ರತಿ ಪಕ್ಷದ ನಾಯಕರನ್ನು ಕರೆಯುತ್ತೇನೆ. ಅವರು ಹೇಳಿದರೆ ಇವತ್ತೇ ನಾನು ಚೆಕ್ ಕೊಡುತ್ತೇನೆ. ನಮಗೆ ಗೊಬ್ಬರ ಕೊಡಲಿ. ಇಲ್ಲದಿದ್ದರೆ ಒಂದು ವಾರಕ್ಕೆ ಕೊಡಲಿ. ತೊಂದರೆಯಿಲ್ಲ. ಇವತ್ತೇ ನಾನು ಮಾತನಾಡುತ್ತೇನೆ. ನಿಮ್ಮನ್ನೂ ಅಲ್ಲಿಗೆ ಕರೆಯುತ್ತೇನೆ. ನೀವು ಯಾರ್ಯಾರು ಆ ಮಹಾ ಮಂಡಲದಲ್ಲಿ ಕೆಲಸ ಮಾಡುತ್ತಿದ್ದೀರಿ. ನಿಮಗೆ influence ಇದೆ. ನೀವೂ ಬನ್ನಿ. ನಾನು ದುಡ್ಡು ಕೊಡುವುದಕ್ಕೆ ಸಿದ್ದನಿದ್ದೇನೆ. ಗೊಬ್ಬರ ತರಿಸೋಣ. ರೈತರನ್ನು ಉಳಿಸೋಣ. ಭಗವಂತನ ದಯೆಯಿಂದ ಮಳೆ ಬೀಳುತ್ತಿದೆ. ಬಿತ್ತನೆಯಾಗಬೇಕಾಗಿದೆ. ರೈತ ನೆಮ್ಮದಿಯಿಂದ ಬದುಕಬೇಕಾಗಿದೆ. ಇದಕ್ಕೆ ಏನು ಸಹಕಾರ ಕೊಡಬೇಕೋ ಅದು ನನ್ನ ಕರ್ತವ್ಯ ಎಂದು ತಿಳಿದುಕೊಂಡು ಅದನ್ನು ನಾನು ಮಾಡುವುದಕ್ಕೆ ಸಿದ್ದನಿದ್ದೇನೆ. ಮಧ್ಯಾಹ್ನ ನಿಮ್ಮನ್ನು ಕರೆಯುತ್ತೇನೆ. ನಾನು ಈಗಲೇ ಮಧ್ಯಾಹ್ನ ಅಧಿಕಾರಿಗಳನ್ನು ಕರೆಸುವುದಕ್ಕೆ ಸೂಚನೆ ಕೊಡುತ್ತೇನೆ. ನಿಮ್ಮನ್ನು ಕರೆದು ನಿಮ್ಮ ಸಮಕ್ಷಮದಲ್ಲಿ ನಾನು ಮಾತನಾಡುತ್ತೇನೆ. ಅಗತ್ಯವಿದ್ದರೆ ಇವತ್ತೇ ಹಣವನ್ನು ಬಿಡುಗಡೆ ಮಾಡುತ್ತೇನೆ.

ಅಧ್ಯಕ್ಷರು : ಆಯಿತು ಬಿಡಿ. ಮುಂದಿನ ಪ್ರಶ್ನೆ. ಹ್ಯಾರಿಸ್ ನೀವು ಪ್ರಶ್ನೆ ಕೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : 17 ಕೋಟಿ ಕೊಡುತ್ತೇನೆಂದು ಹೇಳಿದ ಸರ್ಕಾರದಿಂದ ಒಂದು ಕಾಸನ್ನೂ ಬಿಡುಗಡೆ ಮಾಡಿಲ್ಲ. ಮೊದಲು ಹಣ ಬಿಡುಗಡೆ ಮಾಡಿ.

ಅಧ್ಯಕ್ಷರು : ಸಾಕು ಬಿಡಿ. ಇದು ಸಾಕಷ್ಟು ಸಮಯವಾಗಿದೆ. ಹ್ಯಾರಿಸ್ ಅವರು ಇಲ್ಲ. ಮುಂದಿನ ಪ್ರಶ್ನೆ ಹೆಚ್.ಕೆ.ಕುಮಾರಸ್ವಾಮಿಯವರೆ ಕೇಳಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಇದು ತುಂಬಾ ಗಂಭೀರವಾದ ಪ್ರಶ್ನೆ.

ಅಧ್ಯಕ್ಷರು : ಕೃಷ್ಣಮೂರ್ತಿಯವರೆ. ಎಲ್ಲದನ್ನೂ ಈ ಪ್ರಶ್ನೋತ್ತರದಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ನೀವು ಬಜೆಟ್ ಮೇಲೆ ಮಾತನಾಡಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಎಲ್ಲವನ್ನು ಬಜೆಟ್ ಮೇಲೆ ಮಾತನಾಡುವುದಕ್ಕೆ ಆಗುವುದಿಲ್ಲ. ಮುಖ್ಯಮಂತ್ರಿಗಳು ಹೇಳಿದರೂ ಎಷ್ಟು ದಿವಸದಲ್ಲಿ ಕೊಡುತ್ತಾರೆಂಬುದು ಬೇಕಲ್ಲ. ಇಲ್ಲಿ ಉತ್ತರ ಕೊಡುವಾಗ ತಪ್ಪು ಉತ್ತರ ಕೊಟ್ಟು ನಂತರ ಹೀಗೆ ಹೇಳಿದರೆ ಹೇಗೆ?

ಅಧ್ಯಕ್ಷರು ; ಇಲ್ಲ. ಇಲ್ಲ. ಇದು ಪ್ರಶ್ನೋತ್ತರ. ಅಂದರೆ ಅಷ್ಟನ್ನು ಮಾತ್ರ ಕೇಳಬೇಕು. ಕುಮಾರಸ್ವಾಮಿಯವರೇ ಪ್ರಶ್ನೆ ಕೇಳಿ.

ರಸಗೊಬ್ಬರ ಸರಬರಾಜು ಹಾಗೂ ವಿತರಣೆಯ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 63 : (25)

ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)

ಉತ್ತರಿಸುವ ಸಚಿವರು : ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು)

ಕ್ರ.ಸಂ.	ಪ್ರಶ್ನೆ
ಅ)	ಹಾಸನ ಜಿಲ್ಲೆಗೆ ಅಗತ್ಯಗನುಗುಣವಾಗಿ ರೈತರಿಗೆ ರಸಗೊಬ್ಬರ ಸರಬರಾಜು ಮತ್ತು ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. The required fertilizer to the farmers of Hassan District has not been supplied - whether it has come to the notice of the Government
ಉತ್ತರ	
	ಬಂದಿದೆ Yes

ಕ್ರ.ಸಂ.	ಪ್ರಶ್ನೆ
ಆ)	ಹಾಗಿದ್ದಲ್ಲಿ. ರಸಗೊಬ್ಬರ ಸರಬರಾಜು ಮತ್ತು ವಿತರಣೆಯಾದ ಪ್ರಮಾಣವೆಷ್ಟು ಹಾಗೂ ಅಗತ್ಯವಿದ್ದ ಪ್ರಮಾಣವೆಷ್ಟು (ವಿವರ ನೀಡುವುದು) If so. what is the quantity of fertilizer supplied. destributed and quantity of requirment (details to be furnished):
ಉತ್ತರ	
	ಏಪ್ರಿಲ್ 2008 ಮಾಹೆ ಯಿಂದ ಜೂನ್ ಅಂತ್ಯದವರೆಗೆ ವಿವಿಧ ರಸಗೊಬ್ಬರಗಳಾದ ಯೂರಿಯಾ. ಡಿ.ಎ.ಪಿ ಎಂ.ಒ.ಪಿ. ಮತ್ತು ಎನ್.ಪಿ.ಕೆ ಯ ಬೇಡಿಕೆ. ಸರಬರಾಜು ಪ್ರಮಾಣ ಮತ್ತು ಮಾರಾಟ ವಿವರಗಳನ್ನು ಅನುಬಂಧ _ 1ರಲ್ಲಿ ನೀಡಲಾಗಿದೆ.

The details of Requirement. Receipt and Sales from April 2008 to june 2008 are enclosed - Annexure –1

ಕ್ರ.ಸಂ. ಪ್ರಶ್ನೆ

ಇ) ಆಲೂಗಡ್ಡೆ. ಜೋಳ. ಭತ್ತ. ಕಾಫಿ ಮತ್ತು ಶುಂಠಿ ಬೆಳೆಗಳಿಗೆ ರಸಗೊಬ್ಬರ ಪ್ರಮಾಣ ತೀರಾ ಕಡಿಮೆಯಾಗಿದ್ದು. ಕಾಫಿ ಬಿತ್ತನೆಗೆ ತೊಂದರೆಯಾದ ಕಾರಣ ಸರಬರಾಜು ಮತ್ತು ವಿತರಣೆಗೆ ಕೈಗೊಂಡ ಕ್ರಮವೇನು?

The quantity of fertilizer was wery less for potato. jowar. paddy. coffee and Turmcric What is the action taken for the fertilizers supply and distribution for Coffee sowing?

ಉತ್ತರ

ರಾಜ್ಯ ಕೃಷಿ ಇಲಾಖೆಯು ನೀಡಿರುವ ಜಿಲ್ಲಾವಾರು. ಮಾಹೆವಾರು ರಸಗೊಬ್ಬರ ಬೇಡಿಕೆಯಂತೆ ಕರ್ನಾಟಕಕ್ಕೆ ರಸಗೊಬ್ಬರಗಳನ್ನು ಸಕಾಲದಲ್ಲಿ ಸರಬರಾಜು ಮಾಡುವಂತೆ ಭಾರತ ಸರ್ಕಾರವನ್ನು ಕೋರಲಾಗಿದೆ.

The Government of India has been requested to ensure timely supply of fertilizers to Karnataka as per the district-wise. month-wise demand projected by State Department of Agriculture.

ಅನುಬಂಧ – 1

ಹಾಸನ ಜಿಲ್ಲೆಗೆ ಬೇಡಿಕೆ ಮತ್ತು ಹಂಚಿಕೆ ವಿವರ
(ಏಪ್ರಿಲ್ 08 ರ ಮಾಹೆಯಿಂದ ಜೂನ್ –08 ರ ಮಾಹೆ ಅಂತ್ಯದವರೆಗೆ)

ಕ್ರ.ಸಂ.	ಜಿಲ್ಲೆ	ರಸಗೊಬ್ಬರ ಗ್ರೇಡ್	ಬೇಡಿಕೆ	ಲಭ್ಯತೆ	ಮಾರಾಟ	ಅಂತಿಮ ಶುಲ್ಕ
1	ಹಾಸನ	ಯೂರಿಯಾ	14376	21.253.84	15.354.91	5.898.93
		ಡಿ.ಎ.ಪಿ	10629	10.159.81	8.579.68	1.580.13
		ಎಂ.ಒ.ಪಿ	8786	10.582.46	9.686.91	895.558
		ಎನ್.ಪಿ.ಕೆ	19861	17.466.22	17.253.40	212.815

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಹಾಸನ ಜಿಲ್ಲೆಗೆ ಅಗತ್ಯವಾದಂಥ ರಸಗೊಬ್ಬರ ಸರಬರಾಜು ಮತ್ತು ವಿತರಣೆ ತೃಪ್ತಿಕರವಾಗಿಲ್ಲವೆಂದು ಮಾನ್ಯ ಸಚಿವರು ಒಪ್ಪಿದ್ದಾರೆ. ನಮ್ಮ ಹಾಸನ ಜಿಲ್ಲೆಗೆ ಅಗತ್ಯವಿರುವ ಕಾಂಪ್ಲೆಕ್ಸ್ ಗೊಬ್ಬರ ಸುಮಾರು 51.500 ಮೆ.ಟನ್. ಇಲ್ಲಿಯವರೆಗೆ (ಮೇ ಜೂನ್ ಜುಲೈ) ಬಂದಿರುವುದು 31.000 ಮೆ.ಟನ್. ಅಗತ್ಯವಾಗಿರುವ 20:20 ಗೊಬ್ಬರ 25.000 ಮೆ.ಟನ್. ಇಲ್ಲಿಯವರೆಗೆ ಬಂದಿರುವುದು 10.000 ಮೆ.ಟನ್. ಹಾಸನ ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಎಕರೆ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆಯುತ್ತಾರೆ. ನಮ್ಮ ಸಕಲೇಶಪುರ. ಆಲೂರು. ಅರಕಲಗೂಡು. ಬೇಲೂರು. ಇಲ್ಲಿ ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚು ಎಕರೆ ಜಮೀನಿನಲ್ಲಿ ಕಾಫಿ ಬೆಳೆಯುತ್ತಾರೆ. ಆದರೆ ಇಲ್ಲಿಯವರೆಗೆ ಸರಬರಾಜಾಗಿರುವ ಒಟ್ಟು ಗೊಬ್ಬರ ಸುಮಾರು 2000 ಮೆ.ಟನ್ ಮಾತ್ರ ಅಗತ್ಯವಾಗಿರುವುದು 15 ಸಾವಿರ ಮೆ.ಟನ್. ಇಷ್ಟೊಂದು ಕಡಿಮೆ ಪ್ರಮಾಣದ ಗೊಬ್ಬರ ಸರಬರಾಜು ಆದರೆ ಕಾಫಿ ಬೆಳೆ ಹೇಗೆ ಆಗಬೇಕು. ಇನ್ನಿತರ ಬೆಳೆಗಳ ಸ್ಥಿತಿಗತಿ ಏನು? ಮಾನ್ಯ ಸಚಿವರು ಹೆಚ್ಚು ಗಮನ ಕೊಟ್ಟು ತಕ್ಷಣ ಅಗತ್ಯವಿರುವ ಗೊಬ್ಬರವನ್ನು ಸರಬರಾಜು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಸ್.ಎ.ರವೀಂದ್ರನಾಥ್ : ಹಾಸನ ಜಿಲ್ಲೆಗೆ ಬೇಡಿಕೆ ಮತ್ತು ಹಂಚಿಕೆಯಾಗಿರುವ ವಿವರವನ್ನು ನಾನು ತಿಳಿಸುತ್ತೇನೆ. ಡಿಎಪಿ ಅಲ್ಲಿಗೆ 10629 ಟನ್ ಬರಬೇಕಾಗಿತ್ತು ಆದರೆ 10159 ಟನ್ ಬಂದಿದ್ದು ಅದು ವಿತರಣೆಯಾಗಿದೆ. ಅದೇ ರೀತಿ ಕಾಂಪ್ಲೆಕ್ಸ್ 19861 ಟನ್ ಬರಬೇಕಾಗಿತ್ತು. ಆದರೆ 17466 ಟನ್ ಬಂದಿದ್ದು ಅದು ವಿತರಣೆಯಾಗಿದೆ. ಇರುವುದರಲ್ಲಿ ಕರ್ನಾಟಕದಲ್ಲಿ ಹಾಸನ ಜಿಲ್ಲೆಗೆ ಸಮರ್ಪಕವಾಗಿ ಆಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಹೀಗಾಗಿ ಕೊರತೆ ಇರುವುದರ ಬಗ್ಗೆ ಈಗ ಚರ್ಚಿಸಲಾಯಿತು. ನಮ್ಮ ರಾಜ್ಯಕ್ಕೆ ಸಾಕಷ್ಟು ಗೊಬ್ಬರ ಬರಬೇಕಾಗಿದೆ. ಬಂದ ಮೇಲೆ ಅದನ್ನು ಸಮರ್ಪಕವಾಗಿ ಹಂಚುವಂಥ ಕೆಲಸ ನಾವು ಮಾಡುತ್ತೇವೆ.

ಆಹಾರ ಹಾಗೂ ನಾಗರೀಕ ಪೂರೈಕೆ ವ್ಯವಸ್ಥೆಯಲ್ಲಿ ಸುಧಾರಣೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 64 ; (244)
ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಲಾಲಾಜಿ ಆರ್. ಮಂಡನ್ (ಕಾಪು)
ಉತ್ತರಿಸುವ ಸಚಿವರು ; ಶ್ರೀ ಹೆಚ್. ಹಾಲಪ್ಪ
(ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಕ್ರ.ಸಂ. ಪ್ರಶ್ನೆ

ಅ) ಆಹಾರ ಹಾಗೂ ನಾಗರೀಕ ಪೂರೈಕೆ ವ್ಯವಸ್ಥೆಯಲ್ಲಿ ಅನಿಲ ಆಧಾರಿತ ಒಲೆ ಬಳಸುವವರಿಗೆ ದಿನ ಬಳಕೆಗೆ ಕನಿಷ್ಟ 3 ಲೀಟರ್ ಸೀಮೆಎಣ್ಣೆ ಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ.

ಉತ್ತರ

ಇಲ್ಲ

ಕ್ರ.ಸಂ. ಪ್ರಶ್ನೆ

ಆ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು.

ಉತ್ತರ

ಉದ್ಭವಿಸುವುದಿಲ್ಲ.

ಕ್ರ.ಸಂ. ಪ್ರಶ್ನೆ

ಇ) ಹೊಸ ಪಡಿತರ ಚೀಟಿ ಎಂದಿನಿಂದ ಲಭ್ಯವಾಗುವುದು.

ಉತ್ತರ

ಹೊಸ ಪಡಿತರ ಚೀಟಿಯನ್ನು ನೀಡುವ ಕಾರ್ಯ ನಿರಂತರವಾಗಿರುತ್ತದೆ.

ಕ್ರ.ಸಂ. ಪ್ರಶ್ನೆ

ಈ) ಪಡಿತರ ಚೀಟಿಯಲ್ಲಿ ಬಿ.ಪಿ.ಎಲ್. ಹಾಗೂ ಎ.ಪಿ.ಎಲ್. ಎರಡೇ ವಿಭಾಗ ಮಾಡಿದ್ದಲ್ಲಿ ಗೊಂದಲ ಉಂಟಾಗುವುದಿಲ್ಲವೆ?

ಉತ್ತರ

ಇಲ್ಲ

ಕ್ರ.ಸಂ. ಪ್ರಶ್ನೆ

ಉ) ಇದನ್ನು ತಡೆಗಟ್ಟಲು ಸರ್ಕಾರದ ಕ್ರಮವೇನು?

ಉತ್ತರ

ಉದ್ಭವಿಸುವುದಿಲ್ಲ.

ಶ್ರೀ ಲಾಲಾಜಿ ಆರ್. ಮೆಂಡನ್ : ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಸಾರ್ವಜನಿಕರ ಪರವಾಗಿ ನಾನು ಕೇಳುವುದೇನೆಂದರೆ. ದಿನಬಳಕೆಗೆ ಅನಿಲ ಆಧಾರಿತ ಒಲೆ ಬಳಸುವವರಿಗೂ ಕೂಡ ಕನಿಷ್ಟ ಮೂರು ಲೀಟರ್ ಸೀಮೆಎಣ್ಣೆ ಕೊಡುವ ಬಗ್ಗೆ ಕೇಳಿದ್ದೇನೆ. ಅದನ್ನು ಆದ್ಯತೆಯ ಮೇರೆಗೆ ಪರಿಶೀಲಿಸಬೇಕು. ಮತ್ತು ಅದೇ ರೀತಿಯಲ್ಲಿ ಬಿಪಿಎಲ್ ಮತ್ತು ಎಪಿಎಲ್ ಪಟ್ಟಿಯಲ್ಲಿ ಗೊಂದಲವಿದೆ. ಹೊಸ ಪಡಿತರ ಚೀಟಿಯಲ್ಲೂ ಕೂಡ ತಾತ್ಕಾಲಿಕ ಪಡಿತರ ಚೀಟಿ ಕೊಡುತ್ತಿದ್ದಾರೆ. ಅದಕ್ಕೆ ಸಾಮೂಹಿಕವಾಗಿ ಹೊಸ ಪಡಿತರ ಚೀಟಿ ವಿತರಣೆ ಮಾಡಬೇಕೆಂದು ಮಾನ್ಯ ಆಹಾರ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ. ಮತ್ತು ಅನಿಲ ಆಧಾರಿತ ಒಲೆ ಬಳಸುವವರಿಗೆ ಸೀಮೆಎಣ್ಣೆ ಕೊಡುವ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗಿ ಕೋರುತ್ತೇನೆ.

ಶ್ರೀ ಗೋಪಾಲ ಭಂಡಾರಿ ; ಅನಿಲ ಆದಾರಿತ ಒಲೆ ಬಳಸುವವರಿಗೆ ದಿನ ಬಳಕೆಗೆ ಮೂರು ಲೀಟರ್ ಸೀಮೆಎಣ್ಣೆ ಕೊಡುತ್ತೀರಾ ಎಂದು ಕೇಳಿದಾಗ ಇಲ್ಲವೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ. ತಾವು ಫೋಟೋ ತೆಗೆಸುವ ಕೆಲಸ ಮಾಡಿಸುತ್ತಿದ್ದೇವೆಂದು ಹೇಳಿದರು. ನನ್ನ ಮತಕ್ಷೇತ್ರದ ಕಾರ್ಕಳ ತಾಲ್ಲೂಕಿನಲ್ಲಿ ಫೋಟೋ ತೆಗೆಸುವ ಕೆಲಸವನ್ನು ಮಾಡಿ ಕಾರ್ಡುಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಶೇಕಡ 50ರಷ್ಟು ದೋಷವಿದೆ. ಅದರಲ್ಲಿ ಅನಿಲ ಇಲ್ಲದಿದ್ದವರಿಗೆ ಕಾರ್ಡಿನ ಮೇಲುಗಡೆ ಅನಿಲ ಇದೆ ಎಂದು ಮತ್ತು ಸಿಲಿಂಡರ್ 0 ಎಂದು ಕೆಳಗಡೆ ಇದೆ. ಸಿಲಿಂಡರ್ ಇಲ್ಲದೇ ಅನಿಲ ವಿತರಣೆ ಹೇಗೆ ಆಗುತ್ತದೆ ಎನ್ನುವ ಪ್ರಶ್ನೆ. ಇವರು ಕೊಟ್ಟಿರುವ ಕಾರ್ಡುಗಳಲ್ಲಿ ಸುಮಾರು ಶೇಕಡ 50 ರಷ್ಟು ದೋಷದಿಂದ ಕೂಡಿದೆ. ಹೀಗಾಗಿ ಕ್ಷೇತ್ರದಲ್ಲಿ ನಾವು ಶಾಸಕರು ಸಂಚಾರ ಮಾಡದಂಥ ಪರಿಸ್ಥಿತಿ ಉಂಟಾಗಿದೆ. ಇದಕ್ಕೆ ಮಾನ್ಯ ಆಹಾರ ಮಂತ್ರಿಗಳು ಏನಾದರೂ ಪರಿಹಾರವನ್ನು ಸೂಚಿಸಬೇಕು.

ಶ್ರೀ ಆರ್. ಧ್ರುವನಾರಾಯಣ : ಹೊಸ ಪಡಿತರ ಚೀಟಿ ಎಂದಿನಿಂದ ಲಭ್ಯವಾಗುವುದು ಎನ್ನುವ ಪ್ರಶ್ನೆಗೆ ಹೊಸ ಪಡಿತರ ಚೀಟಿ ನೀಡುವ ಕಾರ್ಯ ನಿರಂತರವಾಗಿರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಈಗಾಗಲೇ ಎಲ್ಲಾ ಕಡೆ ಬಿಪಿಎಲ್ ಕಾರ್ಡುಗಳ ಬಗ್ಗೆ ಸಾಕಷ್ಟು ಸಮಸ್ಯೆಗಳಿರುವುದು ತಮ್ಮ ಗಮನಕ್ಕೆ ಬಂದಿದೆ. ಇದನ್ನು ತಾವು ನಿರಂತರವೆಂದು ಹೇಳಿದರೆ ಹೇಗೆ? ಈಗಾಗಲೇ ಒಂದು ವರ್ಷದಿಂದ ಸಮಸ್ಯೆ ಇದೆ. ಇದಕ್ಕೆ ಇನ್ನೂ ಪರಿಹಾರ ಹೀಗೆ ನಿರಂತರವಾಗಿರಲಿ ಎಂದು ಹೇಳುತ್ತೀರಾ? ತಾವು ಯಾವಾಗ ಇದಕ್ಕೆ ಕೊನೆಯ ಅಂತ್ಯ ಹಾಡುತ್ತೀರಾ? ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಹೆಚ್.ಹಾಲಪ್ಪ : ನಮ್ಮ ಸದಸ್ಯರಾದ ಲಾಲಾಜಿ ಆರ್.ಮೆಂಡನ್‌ರವರು ಹೇಳಿದ ಹಾಗೆ. ಸೀಮೆಎಣ್ಣೆಯದು ಸ್ವಲ್ಪ ತೊಂದರೆಯಿದೆ ಎಂದು ಹೇಳಿದ್ದಾರೆ. ಅವರು ಹೇಳಿದ್ದು ಮಲೆನಾಡಿನ ಎಲ್ಲಾ ಶಾಸಕರ ಅಭಿಪ್ರಾಯ. ಕಳೆದ ಸಾರಿಯೂ ಇದಕ್ಕೆ ಒಂದು ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿತ್ತು. ಸೀಮೆಎಣ್ಣೆಯನ್ನು ನಾವು ಉರುವಲು ಆಗಿ ಉಪಯೋಗಿಸುವುದಿಲ್ಲ. ಅದನ್ನು ಬೆಳಕಿಗಾಗಿ ಉಪಯೋಗಿಸುತ್ತೇವೆ. ಅದಕ್ಕಾಗಿ ಬೇಕೆಂದು ಕೇಳಿದ್ದಾರೆ. ಇದು ಅವರ ಅಭಿಪ್ರಾಯ. ನಾವು ಅದನ್ನು ಪರಿಶೀಲಿಸುತ್ತೇವೆ. ಮತ್ತೊಂದು ಕಾರ್ಡುಗಳಲ್ಲಿ ಆಗಿರುವ ದೋಷಗಳನ್ನು ಸರಿಪಡಿಸುತ್ತೇವೆ. ನಿರಂತರವಾಗಿ ಕೊಡುತ್ತೇವೆಂದು ಹೇಳಿದರೆ ಯಾವಾಗಲೂ ನಡೆಯುವ ಕಾರ್ಯಕ್ರಮ. ದೋಷ ಇರುವುದನ್ನು ಸರಿಪಡಿಸುತ್ತೇವೆ.

ಶ್ರೀ ಆರ್. ಧ್ರುವನಾರಾಯಣ: ಯೂನಿಟ್ ಸಿಸ್ಟ್‌ಂನ್ನು ಹಳ್ಳಿಗಳಲ್ಲಿ ಮಾಡಿ ಎಂದು ಹೇಳಿದ್ದೀರಿ. ಈಗ ಏನಾಗಿದೆ ಎಂದರೆ. ನ್ಯಾಯಬೆಲೆ ಅಂಗಡಿಯವರು. ಯಾರಿಗೆ ಸಿಕ್ಕಿಲ್ಲ. ಸಾಮಾಜಿಕ ನ್ಯಾಯವೆಂದು ಹಂಚುತ್ತಿದ್ದಾರೆ. ತಾವು ಯೂನಿಟ್ ಸಿಸ್ಟ್‌ಂನ್ನು ಹಂಚಿದರೆ ನಿಜವಾಗಲೂ ಬಹಳ ಸಮಸ್ಯೆಯಾಗುತ್ತದೆ. ನೀವು ಪೂರ್ಣವಿರಾಮ ಹಾಕುವವರೆವಿಗೂ ಅಂದರೆ ನೀವು ಬಿಪಿಎಲ್ ಕಾರ್ಡು ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಕೊಟ್ಟಾದ ಮೇಲೆ ಯೂನಿಟ್ ಸಿಸ್ಟ್‌ಂ ಮಾಡಿದರೆ ನಿಜವಾಗಲೂ ಯಾವುದೇ ತೊಂದರೆಯಿರುವುದಿಲ್ಲ. ನೀವು ಈಗಲೇ ಯೂನಿಟ್ ಸಿಸ್ಟ್‌ಂ ಮಾಡಿದರೆ ಊರುಗಳಲ್ಲಿ ಶಾಸಕರ್ಯಾರು ಹೋಗುವುದಕ್ಕೆ ಆಗುವುದಿಲ್ಲ. ದಯಮಾಡಿ ತಾವು ಇದಕ್ಕೆ ಅಂತಿಮ ತೆರೆ ಎಳೆಯಬೇಕು.

ಶ್ರೀ ಹೆಚ್.ಹಾಲಪ್ಪ : ಮಾನ್ಯ ಅಧ್ಯಕ್ಷರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈಗ ಫೋಟೋಗ್ರಫಿ ಕೆಲಸ ನಡೆಯುತ್ತಿದೆ. ಇದು ಆದನಂತರ ಈಗಿರತಕ್ಕಂಥ ತಾರತಮ್ಯ ಸರಿಯಾಗುತ್ತದೆ. ಇದರಲ್ಲಿರತಕ್ಕಂಥ ತಾರತಮ್ಯವನ್ನು 5 ವರ್ಷದಿಂದ ಸರಿಪಡಿಸುತ್ತಲೇ ಇದ್ದೀರೆಂದು ಮಾನ್ಯ ಸದಸ್ಯರು ಹೇಳಿದರು. ಆದರೆ. ನಾವು ಬಂದು 3 ತಿಂಗಳು ಮಾತ್ರವಾಗಿದೆ. ಖಂಡಿತ ನಾವು ಸರಿಪಡಿಸುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಈ ಪ್ರಶ್ನೆಗೆ ಚರ್ಚೆ ಸಾಕು. ಇನ್ನು ಎರಡು ಪ್ರಶ್ನೆಗಳಿವೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ :– ಮಾನ್ಯ ಅಧ್ಯಕ್ಷರೆ. ರೇಷನ್ ಕಾರ್ಡ್ ವಿತರಣೆಯಲ್ಲಿ ಬಹಳಷ್ಟು ಗೊಂದಲ ಇದೆ. ಮಾನ್ಯ ಮುಖ್ಯಮಂತ್ರಿಗಳು

ಇಲ್ಲಿರುವುದರಿಂದ ಇದರ ಬಗ್ಗೆ ಏನಾದರೊಂದು ಪರಿಹಾರವನ್ನು ಹೇಳಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಇದರ ಬಗ್ಗೆ ಸರ್ವೆ ಆಗಬೇಕು ಪುನರ್ ಸರ್ವೇ ಮಾಡುವುದಿಲ್ಲವೆಂದು ಅವರು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಬಿ.ಸಿ.ಪಾಟೀಲ್‌ರವರೆ. ಬಜೆಟ್ ಮೇಲೆ ಮಾತನಾಡುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ. ಆ ಸಂದರ್ಭದಲ್ಲಿ ತಾವು ಕೂಡ ಬಿ.ಪಿ.ಎಲ್. ಕಾರ್ಡ್ ಮೇಲೆ ಮಾತನಾಡಿ. ಈ ಪ್ರಶ್ನೆಯಲ್ಲಿ ಯೂನಿಟ್ ಸಿಸ್ಟಮ್ ಬಗ್ಗೆ ಇರುವುದಿಲ್ಲ. ಆದ್ದರಿಂದ. ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ :– ಇದರ ಬಗ್ಗೆ ಮಾತನಾಡುವುದಕ್ಕೆ ಪ್ರತ್ಯೇಕವಾಗಿ ಮಾತನಾಡುವುದಕ್ಕೆ ಎರಡು ಗಂಟೆ ಅವಧಿಯನ್ನು ತಾವು ಕೊಡಬೇಕಾಗುತ್ತದೆ.

ಅಧ್ಯಕ್ಷರು :– ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅರ್ಧ ಗಂಟೆ ಚರ್ಚೆಗೆ ಪ್ರತ್ಯೇಕ ಅವಕಾಶ ಮಾಡಿಕೊಡುತ್ತೇನೆ. ನಿಮ್ಮ ಭಾವನೆಗಳಿಗೆ ನಾನು ಸ್ಪಂದನೆ ಮಾಡಿದ್ದೇನೆ. ಇದು ಬಹಳ ಮಹತ್ವದ ಪ್ರಶ್ನೆಯಾಗಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡಲು ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ :– ಈ ಸದನ ಮುಗಿಯುವುದರೊಳಗೆ ಅವಕಾಶ ಕೊಡಬೇಕು.

ಅಧ್ಯಕ್ಷರು ;– ಈ ಸದನ ಮುಗಿಯುವುದರೊಳಗೆ ಅವಕಾಶ ಕೊಡುತ್ತೇನೆ. ಮುಗಿದ ನಂತರ ಹೇಗೆ ಕೊಡುವುದಕ್ಕೆ ಆಗುತ್ತದೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ :– ಮಾನ್ಯ ಅಧ್ಯಕ್ಷರೆ, ಪ್ರಶ್ನೆಗಳಿಗೆ ಅಧಿಕಾರಿಗಳು ಸರಿಯಾದ ಉತ್ತರವನ್ನು ಮಾನ್ಯ ಸಚಿವರಿಗೆ ಒದಗಿಸಿ ಕೊಡದಿದ್ದಾಗ ತಾವು ಮತ್ತೊಂದು ಸಾರಿ ಇಂಥ ವಿಷಯಗಳ ಮೇಲೆ ಚರ್ಚೆ ಮಾಡಲು ಅವಕಾಶ ಕೊಡಬೇಕಾಗುತ್ತದೆ.

ಅಧ್ಯಕ್ಷರು :– ಅವಕಾಶ ಕೊಡುತ್ತೇನೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಜಲಾಯನ ಅಭಿವೃದ್ಧಿ ಇಲಾಖೆಗೆ ಬಂದಿರುವ ಅನುದಾನ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 65 : 34
ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)
ಉತ್ತರಿಸಬೇಕಾದ ಸಚಿವರು : ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ	ರಾಯಚೂರು ಜಿಲ್ಲೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಜಲಾನಯನ ಅಭಿವೃದ್ಧಿ ಇಲಾಖೆಗೆ ಬಿಡುಗಡೆಯಾದ ಹಣ ಎಷ್ಟು? (3 ವರ್ಷಗಳ ವಿವರ ನೀಡುವುದು)	ರಾಯಚೂರು ಜಿಲ್ಲೆಗೆ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರ ವರ್ಷ | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) 2005–06 | 1145.626 2006–07 | 776.544 2007–08 | 875.141 ಒಟ್ಟು | 2797.311
ಆ	ಹಾಗಿದ್ದಲ್ಲಿ, ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಹಣವನ್ನು ಹಂಚಿಕೆ ಮಾಡಲಾಗಿದೆ? ತಾಲ್ಲೂಕುವಾರು ವಿವರ ನೀಡುವುದು..	ತಾಲ್ಲೂಕುವಾರು ಅನುದಾನ ಹಂಚಿಕೆ ವಿವರ (ರೂ. ಲಕ್ಷಗಳಲ್ಲಿ) ವರ್ಷ | ರಾಯಚೂರು | ಮಾನ್ವಿ | ದೇವದುರ್ಗ | ಲಿಂಗಸುಗೂರು | ಸಿಂಧನೂರು 2005–06 | 211.679 | 291.573 | 220.352 | 259.357 | 162.665 2006–07 | 122.475 | 249.979 | 126.727 | 151.483 | 125.88 2007–08 | 109.544 | 371.123 | 121.925 | 139.89 | 132.659 ಒಟ್ಟು | 443.698 | 912.675 | 469.004 | 550.73 | 421.204
ಇ	ಸಿಂಧನೂರು ತಾಲ್ಲೂಕಿಗೆ ಜಿಲ್ಲಾ ಮತ್ತು ತಾಲ್ಲೂಕ್ ಪಂಚಾಯತಿ ವತಿಯಿಂದ ಕೃಷಿ ಇಲಾಖೆಗೆ ಬಿಡುಗಡೆಯಾದ ಹಣ ಎಷ್ಟು ? (3 ವರ್ಷಗಳ ವಿವರ ನೀಡುವುದು)	ಸಿಂಧನೂರು ತಾಲ್ಲೂಕಿಗೆ ಬಿಡುಗಡೆಯಾದ ವರ್ಷವಾರು ಹಣದ ವಿವರ ಇಂತಿದೆ. (ಲಕ್ಷ ರೂ.ಗಳಲ್ಲಿ) ವಿವರ | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) | 2006–07 | 2007–08 ತಾಲ್ಲೂಕು ಪಂಚಾಯತಿ | 3.21 | 3.21 ಜಿಲ್ಲಾ ಪಂಚಾಯತಿ | 44.80 | 64.29 ಒಟ್ಟು | 48.01 | 67.5
ಈ	ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಸಿಂಧನೂರು ತಾಲ್ಲೂಕಿಗೆ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ? (ವಿವರ ನೀಡುವುದು)	ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಸಿಂಧನೂರು ತಾಲ್ಲೂಕಿನಲ್ಲಿ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. 1. ಸಮಪಾತಳಿ ಬದು 2. ಕೊರಕಲು ತಡೆ 3. ತಡೆ ಅಣೆಕಟ್ಟು 4. ಕೃಷಿ ಹೊಂಡ 4. ಅರಣ್ಯೀಕರಣ 6. ತೋಟಗಾರಿಕೆ 7. ಉಪ್ಪು ಮತ್ತು ಕ್ಷಾರೀಯ ಭೂ ಅಭಿವೃದ್ಧಿ 8. ಪಶು ಚಿಕಿತ್ಸಾ ಶಿಬಿರ
ಉ	ಹಾಗಿದ್ದಲ್ಲಿ, ಆ ಎಲ್ಲಾ ಕಾಮಗಾರಿಗಳು ಪೂರ್ಣವಾಗಿದೆಯೇ ಅಥವಾ ಇಲ್ಲವೆ ? (ವಿವರ ನೀಡುವುದು)	ಕೈಗೊಂಡ ಕಾಮಗಾರಿಗಳು ಪೂರ್ಣಗೊಂಡಿವೆ. ವಿವರಗಳನ್ನು ಅನುಬಂಧ –1 ರಲ್ಲಿ ನೀಡಲಾಗಿದೆ.

25th July 2008

(B)25227

ಅನುಬಂಧ -1

ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಸಿಂಧನೂರು ತಾಲ್ಲೂಕಿನಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ವಿವರ

ಕ್ರ. ಸಂ.	ಯೋಜನೆಯ ಹೆಸರು	ಕಾಮಗಾರಿಯ ಹೆಸರು	ಘಟಕ	2005-06		2006-07		2007-08	
				ಭೌತಿಕ ಸಾಧನೆ	ಕಾಮಗಾರಿಯ ಹಂತ	ಭೌತಿಕ ಸಾಧನೆ	ಕಾಮಗಾರಿಯ ಹಂತ	ಭೌತಿಕ ಸಾಧನೆ	ಕಾಮಗಾರಿಯ ಹಂತ
1	ಸಮಗ್ರ ಬಂಜರು ಭೂಮಿ ಪ್ರದೇಶಾಭಿವೃದ್ಧಿ ಯೋಜನೆ (IWDP)	ಸಮಪಾತಳಿ ಬದು	ಹೆಕ್ಟೇರ್	560	ಪೂರ್ಣ	608	ಪೂರ್ಣ	1934	ಪೂರ್ಣ
		ಕೊರಕಲು ತಡೆ	ಸಂಖ್ಯೆ	36	ಪೂರ್ಣ	110	ಪೂರ್ಣ	56	ಪೂರ್ಣ
		ಚೆಕ್ ಡ್ಯಾಂ	ಸಂಖ್ಯೆ	9	ಪೂರ್ಣ	27	ಪೂರ್ಣ	17	ಪೂರ್ಣ
		ಕೃಷಿ ಹೊಂಡ	ಸಂಖ್ಯೆ	0	–	0	–	2	ಪೂರ್ಣ
		ಅರಣ್ಯೀಕರಣ	ಹೆಕ್ಟೇರ್	127	ಪೂರ್ಣ	145	ಪೂರ್ಣ	156	ಪೂರ್ಣ
		ತೋಟಗಾರಿಕೆ	ಹೆಕ್ಟೇರ್	136	ಪೂರ್ಣ	158	ಪೂರ್ಣ	204	ಪೂರ್ಣ
		ಪಶು ಸಂಗೋಪನೆ	ಹೆಕ್ಟೇರ್	0	–	42	ಪೂರ್ಣ	0	–
		ಪಶು ಚಿಕಿತ್ಸಾ ಶಿಬಿರ AHC	ಸಂಖ್ಯೆ	0	–	0	–	12	ಪೂರ್ಣ
2.	ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ (SGRY) (ZP)	ಸಮಪಾತಳಿ ಬದು	ಹೆಕ್ಟೇರ್	77	ಪೂರ್ಣ	0	–	0	–
		ಚೆಕ್ ಡ್ಯಾಂ	ಸಂಖ್ಯೆ	10	ಪೂರ್ಣ	0	–	0	–
3.	ಉಪ್ಪು ಮತ್ತು ಕ್ಷಾರೀಯ ಭೂ ಅಭಿವೃದ್ಧಿ ಯೋಜನೆ (LR)	ಲ್ಯಾಂಡ್ ರಿಕ್ಲಮೇಶನ್	ಹೆಕ್ಟೇರ್	47	ಪೂರ್ಣ	89	ಪೂರ್ಣ	75	ಪೂರ್ಣ
4.	ಸುವರ್ಣ ಕೃಷಿ ಹೊಂಡ (SKH)	ಕೃಷಿ ಹೊಂಡ	ಸಂಖ್ಯೆ	0	–	365	ಪೂರ್ಣ	40	ಪೂರ್ಣ
5.	ಆರ್.ಐ.ಡಿ.ಎಪ್. ಯೋಜನೆ (RIDF)	ಚೆಕ್ ಡ್ಯಾಂ	ಸಂಖ್ಯೆ	3	ಪೂರ್ಣ	0	–	0	–
		ಕೃಷಿ ಹೊಂಡ	ಸಂಖ್ಯೆ	8	ಪೂರ್ಣ	0	–	7	ಪೂರ್ಣ
6.	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY)	ಕೃಷಿ ಹೊಂಡ	ಸಂಖ್ಯೆ	0	–	0	–	50	ಪೂರ್ಣ
7.	ವಿಶೇಷ ಘಟಕ ಯೋಜನೆ (SCP)	ಕೃಷಿ ಹೊಂಡ	ಸಂಖ್ಯೆ	5	ಪೂರ್ಣ	3	ಪೂರ್ಣ	4	ಪೂರ್ಣ

ಶ್ರೀ ನಾಡಗೌಡ ವೆಂಕಟರಾವ್ :– ಮಾನ್ಯ ಅಧ್ಯಕ್ಷರೆ. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಪೂರ್ಣವಾದ ವಿವರಗಳನ್ನು ಕೇಳಿದರೆ ಕೇವಲ ಎಲ್ಲೆಲ್ಲಿ ಭೌತಿಕ ಸಾಧನೆ ಎಷ್ಟೆಂದು ಮಾತ್ರ ಉತ್ತರದಲ್ಲಿ ಹೇಳಿದ್ದಾರೆ. ಆದರೆ. ಯಾವ ಊರಿನಲ್ಲಿ ತೆಗೆದುಕೊಂಡಿದ್ದಾರೆ ಎಂಬ ಮಾಹಿತಿ ಇದರಲ್ಲಿ ಇಲ್ಲ. ದಯವಿಟ್ಟು ಆ ಮಾಹಿತಿಯನ್ನು ಒದಗಿಸಿದರೆ ನಮಗೆ ಗೊತ್ತಾಗುತ್ತದೆಂಬ ಉದ್ದೇಶದಿಂದ ಎಲ್ಲಾ ಮಾಹಿತಿಗಳನ್ನು ನಾನು ಕೇಳಿದ್ದೇನೆ. ಮತ್ತೊಂದು ಪ್ರಶ್ನೆ ಏನೆಂದರೆ. ಸಮಗ್ರ ಬಂಜರು ಭೂಮಿ ಪ್ರದೇಶಾಭಿವೃದ್ಧಿ ಯೋಜನೆಯನ್ನು ತೆಗೆದುಕೊಂಡಿರುವ ಬಗ್ಗೆ ಹೇಳಿದ್ದೀರಿ. ಇದರಲ್ಲಿ ಸುಮಾರು 1934 ಕೆಲಸಗಳು ಪೂರ್ಣವಾಗಿವೆ ಎಂದು ಹೇಳಿದ್ದೀರಿ. ಆದರೆ. ಎಲ್ಲೆಲ್ಲಿ ಈ ಕೆಲಸಗಳು ಮಾಡಲಾಗಿದೆ ಎಂಬ ಮಾಹಿತಿ ನನಗೆ ಸಿಕ್ಕಿಲ್ಲ. ಮತ್ತೆ ನೀರಾವರಿ ಪ್ರದೇಶಗಳಲ್ಲಿಯೂ ಕೂಡ ಈ ರೀತಿಯಾಗಿ ಬಂಜರು ಭೂಮಿಗಳಾಗಿವೆ. ಮೇಲುಗಡೆಯಿಂದ ನೀರು ಹರಿಸುವುದರಿಂದ ಕೆಳಗಡೆ ಇರತಕ್ಕಂಥ ಬಡವರ ಭೂಮಿಗಳು ಬಂಜರು ಭೂಮಿ ಆಗಿರತಕ್ಕಂಥದ್ದನ್ನು ನಾನು ಗಮನಿಸಿದ್ದೇವೆ. ಆದ್ದರಿಂದ. ಈ ಪ್ರದೇಶಗಳಲ್ಲಿಯೂ ಇಂಥ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆಯೇ ಅಥವಾ ಇಲ್ಲವೇ ಎಂಬ ಮಾಹಿತಿಯನ್ನು ಈ ಸಂದರ್ಭದಲ್ಲಿ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಮತ್ತೆ ನಾನು ಈಗಾಗಲೇ ಕೇಳಿರತಕ್ಕಂಥ ಪ್ರಶ್ನೆಗೆ ಪೂರ್ಣವಾದ ಉತ್ತರವನ್ನು ಅಂದರೆ ಎಲ್ಲೆಲ್ಲಿ ತೆಗೆದುಕೊಳ್ಳಲಾಗಿದೆ ಎಂಬ ವಿವರವನ್ನು ಕೊಟ್ಟಿಲ್ಲ. ಆದ್ದರಿಂದ. ಸದರಿ ವಿವರಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ್ ;– ಮಾನ್ಯ ಅಧ್ಯಕ್ಷರೆ. ಅವರ ಪ್ರಶ್ನೆಗೆ ಸಂಬಂಧಪಟ್ಟಂತೆ ಎಲ್ಲಾ ವಿವರಗಳನ್ನು ಒದಗಿಸಿಕೊಟ್ಟಿದ್ದೇವೆ. ಮತ್ತೆ ಯಾವ್ಯಾವುದಕ್ಕೆ ಎಷ್ಟೆಷ್ಟು ಹಣವೆಂದು ಸಹ ಸ್ಪಷ್ಟವಾಗಿ ತಿಳಿಸಿದ್ದೇವೆ. ಕೇಂದ್ರದಿಂದ ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಹಣ ಬಂದಿದೆ ಎಂದು ಕೇಳಿದ್ದಾರೆ. ಕೇಂದ್ರ ಸರ್ಕಾರದಿಂದ 20 ಕೋಟಿ 53 ಲಕ್ಷ ಮತ್ತು ರಾಜ್ಯ ಸರ್ಕಾರದಿಂದ 7 ಕೋಟಿ 43 ಲಕ್ಷ ರೂಪಾಯಿಯಗಳನ್ನು ಕೊಡತಕ್ಕಂಥದ್ದನ್ನು ಮಾಡಲಾಗಿದೆ. ಇದು ಯಾವ್ಯಾವ ರೀತಿ ಏನು ಎಂಬುದರ ಪ್ರಶ್ನೆ ಇದರಲ್ಲಿ ಇರಲಿಲ್ಲ. ಆದರೆ. ಅವರು ಕೇಳಿರತಕ್ಕಂಥದ್ದಕ್ಕೆ ಸ್ಪಷ್ಟವಾದ ಉತ್ತರವನ್ನು ತಿಳಿಸಿದ್ದೇವೆ.

ನ್ಯಾಯ ಬೆಲೆ ಅಂಗಡಿಯಲ್ಲಿ ಸರಬರಾಜು ಮಾಡುತ್ತಿರುವ ಆಹಾರ ಧಾನ್ಯಗಳ ಗುಣಮಟ್ಟ

ಚುಕ್ಕೆ ಗುರುತಿನ ಸಂಖ್ಯೆ 56 : (32)

ಸದಸ್ಯರ ಹೆಸರು : ಶ್ರೀ ರೋಷನ್ ಬೇಗ್. ಆರ್.(ಶಿವಾಜಿನಗರ)

ಉತ್ತರಿಸುವ ಸಚಿವರು : ಶ್ರೀ ಹೆಚ್. ಹಾಲಪ್ಪ
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಕ್ರ.ಸಂ. ಪ್ರಶ್ನೆ

ಅ) ತೂಕ ಮತ್ತು ಅಳತೆ ಇಲಾಖೆಯ ಕಾರ್ಯವೈಖರಿಯ ವಿವರ ನೀಡುವುದು.

ಉತ್ತರ

ಕಾನೂನು ಮಾಪನಶಾಸ್ತ್ರ ಲಾಖೆಯು ತೂಕ ಮತ್ತು ಅಳತೆಗಳಲ್ಲಿ ನಿಖರತೆಯನ್ನು ಕಾಪಾಡುವ. ಆಟೋ ದರ ಮೀಟರ್‌ಗಳು ನಿಗದಿತ ದೂರಕ್ಕೆ ಸರಿಯಾದ ದರವನ್ನು ನೊಂದಾಯಿಸುವಂತೆಯೂ ಹಾಗೂ ಪೊಟ್ಟಣ ಸಾಮಾಗ್ರಿಗಳನ್ನು ಮುದ್ರಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡದಂತೆ ಕ್ರಮವಹಿಸುವುದು ಈ ಇಲಾಖೆಯ ಮುಖ್ಯ ಕಾರ್ಯ ವೈಖರಿಯಾಗಿರುತ್ತದೆ.

ಕ್ರ.ಸಂ. ಪ್ರಶ್ನೆ

ಆ) ಇಲಾಖೆಯ ತೂಕ ಮತ್ತು ಅಳತೆಯನ್ನು ಉಲ್ಲಂಘಿಸಿದವರ ಮೇಲೆ ದೂರು ದಾಖಲಿಸಿದೆಯೇ.

ಉತ್ತರ

ಹೌದು

ಕ್ರ.ಸಂ. ಪ್ರಶ್ನೆ

ಇ) ಹಾಗಿದ್ದಲ್ಲಿ. ಕಳೆದ 3 ವರ್ಷಗಳಲ್ಲಿ ಎಷ್ಟು ದೂರುಗಳನ್ನು ದಾಖಲಿಸಿ ಕೊಳ್ಳಲಾಗಿದೆ.

ಉತ್ತರ

ಕಳೆದ 3 ವರ್ಷಗಳಲ್ಲಿ ತೂಕ ಮತ್ತು ಅಳತೆ ಕಾನೂನು/ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ಧ ಈ ಕೆಳಕಂಡಂತೆ ಮೊಕದೊಮ್ಮೆಗಳನ್ನು ದಾಖಲಿಸಲಾಗಿದೆ.

2005–06	33.225
2006–07	37.811
2007–08	43.467

ಕ್ರ.ಸಂ. ಪ್ರಶ್ನೆ

ಈ) ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)

ಉತ್ತರ

ತೂಕ ಮತ್ತು ಅಳತೆ ಕಾನೂನು ಮತ್ತು ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ಧ ಮೊಕದ್ದಮ್ಮೆಗಳನ್ನು ದಾಖಲಿಸಿ. ಅವುಗಳನ್ನು ಅಭಿಸಂಧಾನ ನಡವಳಿ ಮೂಲಕ ರಾಜಿ ಸಂಧಾನಮಾಡಿ ದಂಡ ದಾಖಲಿಸಿ ಕ್ರಮ ಜರುಗಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಅಭಿಸಂಧಾನವಾದ ಮೊಕದ್ದಮೆಗಳು. ವಸೂಲು ಮಾಡಲಾದ ಅಭಿಸಂಧಾನ ದಂಡ ಹಾಗೂ ನ್ಯಾಯಾಲಯದಲ್ಲಿ ದಾಖಲಿಸಲಾದ ಮೊಕದ್ದಮ್ಮೆ ಹಾಗೂ ವಸೂಲಾದ ದಂಡ ಈ ಕೆಳಕಂಡಂತಿದೆ.

ವರ್ಷ	ಅಭಿಸಂಧಾನವಾದ ಮೊಕದ್ದಮ್ಮೆಗಳು	ಅಭಿಸಂಧಾನ ದಂಡ	ನ್ಯಾಯಲಯದಲ್ಲಿ ದಾಖಲಿಸಿದ ಮೊಕದ್ದಮ್ಮೆಗಳು	ನ್ಯಾಯಾಲಯದಲ್ಲಿ ವಿಧಿಸಿದ ದಂಡ
05–06	32.244	2.51.53.786	233	1.92.100
06–08	37.312	3.0875.755	284	3.24.550
07–08	42.986	4.34.57.336	219	4.00.380

ಕ್ರಸಂ.	ಪ್ರಶ್ನೆ
ಊ)	ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರದಾರರಿಗೆ ಗುಣಮಟ್ಟವಲ್ಲದ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲಾಗುತ್ತಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ.
ಉತ್ತರ	
	–ಇಲ್ಲ–
ಕ್ರಸಂ.	**ಪ್ರಶ್ನೆ**
ಋ)	ಹಾಗಿದ್ದಲ್ಲಿ. ಗುಣಮಟ್ಟದಲ್ಲದ ಆಹಾರ ಧಾನ್ಯಗಳನ್ನು ಸರಬರಾಜು ಮಾಡುತ್ತಿರುವ ನ್ಯಾಯಬೆಲೆ ಅಂಗಡಿಗಳ ಮೇಲೆ ಯಾವ ಕ್ರಮಕೈಗೊಳ್ಳಲಾಗಿದೆ (ವಿವರ ನೀಡುವುದು)
ಉತ್ತರ	
	–ಉದ್ಭವಿಸುವುದಿಲ್ಲ–

ಶ್ರೀ ಆರ್.ರೋಷನ್ ಬೇಗ್ ;– ಮಾನ್ಯ ಅಧ್ಯಕ್ಷರೆ. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕಂಥ ತೂಕ ಮತ್ತು ಅಳತೆ ಇಲಾಖೆಗೆ ಒಂದು ದೊಡ್ಡ ಬೀಗವನ್ನು ಹಾಕಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ. ಇದು ಏನು ಕೆಲಸ ಮಾಡುತ್ತಿದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಇಷ್ಟು–ಅಷ್ಟು ಕೇಸ್‌ಗಳನ್ನು ಬುಕ್ ಮಾಡಿದ್ದೇವೆಂದು ವರದಿ ಪ್ರಕಾರ ಹೇಳಿದ್ದೀರಿ. ಇವತ್ತಿನ ದಿವಸ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳನ್ನು ಬಿಟ್ಟು ಕೇವಲ ಬೆಂಗಳೂರು ನಗರದಲ್ಲಿರತಕ್ಕಂಥ ಆಟೊ ಮೀಟರ್ಸ್, ಟ್ಯಾಕ್ಸಿ ಮೀಟರ್ಸ್ ಮತ್ತು ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್‌ನ್ನು ಮೆಷರ್ ಮಾಡುವುದನ್ನು ನೋಡಿದರೆ ಗೊತ್ತಾಗುತ್ತದೆ. ಇವತ್ತಿನ ದಿವಸ ಯಾವುದೇ ಪೆಟ್ರೋಲ್ ಬಂಕ್‌ನಲ್ಲಿಯೂ ಕೂಡ ಪೆಟ್ರೋಲ್‌ನ್ನು ಸರಿಯಾಗಿ ಮೆಷರ್ ಮಾಡುವುದಿಲ್ಲ. ಆದ್ದರಿಂದ. ನಿಮ್ಮ ಇಲಾಖೆಯವರು ಎಷ್ಟು ಪೆಟ್ರೋಲ್ ಬಂಕ್ ಮೇಲೆ ನಿಗಾ ಇಟ್ಟಿದ್ದೀರಿ? ನಿಮ್ಮ ಇಲಾಖೆಯಲ್ಲಿ ಎಷ್ಟು ಅಧಿಕಾರಿಗಳಿದ್ದಾರೆ? ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಮತ್ತೆ ನ್ಯಾಯಬೆಲೆ ಅಂಗಡಿಗಳಲ್ಲಿ ಗುಣಮಟ್ಟದ ಆಹಾರ ಧಾನ್ಯಗಳು ಸರಬರಾಜು ಆಗುತ್ತಿಲ್ಲವೆಂದು ನಾನು ಕೇಳಿದ್ದೇನೆ. ಈಗಲೂ ಕೂಡ ನಾನು ಗೋಧಿ. ಅಕ್ಕಿಗಳೆಲ್ಲವನ್ನು ಕಲಬೆರಕೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಒಬ್ಬ ಲೇಮ್ಯಾನ್ ಹೋಗಿ ಅಕ್ಕ. ಗೋಧಿಯನ್ನು ಕೈಯಲ್ಲಿ ಹಿಡಿದುಕೊಂಡು ನೋಡಿದಾಗ ಇದೆಲ್ಲಾ ಕಲಬೆರಕೆ ಎಂದು ಗೊತ್ತಾಗುತ್ತದೆ. ಇದು ಕೇವಲ ಒಬ್ಬ ಲೇಮ್ಯಾನ್‌ಗೆ ಗೊತ್ತಾಗುತ್ತದೆಂದರೆ ನಿಮ್ಮ ಇಲಾಖೆಯವರು ಏನು ಮಾಡುತ್ತಿದ್ದಾರೆಂಬುದನ್ನು ತಾವೇ ಹೇಳಬೇಕು? ಇವತ್ತಿನ ದಿವಸ ಯಾವುದೇ ರೇಷನ್ ಕಾರ್ಡ್ ಅಂಗಡಿಯಲ್ಲಿ ಒಳ್ಳೆಯ ಅಕ್ಕಿ. ಗೋಧಿ ಸಿಗುತ್ತದೆಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ. ನಿಮ್ಮ ಇಲಾಖೆಯ ಅಧಿಕಾರಿಗಳು ನಿದ್ದೆ ಮಾಡುತ್ತಿದ್ದಾರೆಯೇ? ನೀವೊಬ್ಬರು ಯುವಕ ಸಚಿವರಾಗಿದ್ದೀರಿ. ಆದ್ದರಿಂದ. ಬಹಳ ಚೆನ್ನಾಗಿ ಕೆಲಸ ಮಾಡಿ ಜನರಿಗೆ ಒಳ್ಳೆಯ ಅಕ್ಕಿ ಗೋಧಿ. ಸಿಗುವಂತೆ ಮಾಡಿ.

ಶ್ರೀ ಹೆಚ್. ಹಾಲಪ್ಪ :– ಮಾನ್ಯ ಅಧ್ಯಕ್ಷರೆ. ಈಗಾಗಲೇ 42 ಸಾವಿರ ಕೇಸ್‌ಗಳನ್ನು ಹಾಕಿ ಸಾಕಷ್ಟು ದಂಡವನ್ನು ಸಹ ಕಟ್ಟಿಸತಕ್ಕಂಥ ಕೆಲಸವನ್ನು ಮಾಡಲಾಗಿದೆ. ಈ ಸಾರಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ವಿಶೇಷವಾದಂಥ ಗಮನವನ್ನು ಹರಿಸಿ ನಮ್ಮ ಇಲಾಖೆಯನ್ನು ಸ್ಟ್ರೆಂಥನ್ ಮಾಡಲಾಗುತ್ತದೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಮುಂದೆ ಈ ಇಲಾಖೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸಜ್ಜುಗೊಳಿಸಿದ್ದಾರೆ. ಮತ್ತೆ ಇದಕ್ಕೆ ಬೇಕಾಗಿರತಕ್ಕಂಥ ಹಣವನ್ನು ಮಾನ್ಯ ಮುಖ್ಯ ಮಂತ್ರಿಗಳು ಒದಗಿಸುತ್ತಿದ್ದಾರೆ. ಮತ್ತೆ ನ್ಯಾಯ ಬೆಲೆ ಅಂಗಡಿಯಲ್ಲಿ

ನೀಡುತ್ತಿರುವ ಆಹಾರ ಪದಾರ್ಥಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ನ್ಯಾಯಬೆಲೆ ಅಂಗಡಿಗಳಿಗೆ F.C.I. ಗೋಡೌನ್ ನಿಂದ ಆಹಾರ ಪದಾರ್ಥಗಳನ್ನು ಕೊಡುತ್ತಾರೆ. F.A.Q (Fair average quality) ಎಂದು ಕೇಂದ್ರ ಸರ್ಕಾರ ಒಂದು ನಾರ್ಮ್ಸ್‌ನ್ನು ನಿಗದಿ ಮಾಡಿದ್ದಾರೆ. ಅದರ ಪ್ರಕಾರ ಇರತಕ್ಕಂಥ ಆಹಾರವನ್ನು ನಾವು ಸರಬರಾಜು ಮಾಡುತ್ತೇವೆ. ತಾವು ಕಲಬೆರೆಕೆ ಆಗುತ್ತದೆಂದು ತಾವು ಹೇಳಿದ್ದೀರಿ. ಆದರೆ. ಕಲಬೆರಕೆಗಿಂತ ಅಲ್ಲಿ ಸಾಕಷ್ಟು ಆಹಾರ ಜನರಿಗೆ ಮುಟ್ಟಿತ್ತಿಲ್ಲವೆಂಬ ದೂರು ಇದೆ. ನಾನು ಕೂಡ ಹೋಗಿ ನೋಡಿದ್ದೇನೆ. ಮತ್ತೆ ನಮ್ಮ ಅಧಿಕಾರಿಗಳು ಸಾಕಷ್ಟು ಪತ್ತೆ ಕೂಡ ಹಚ್ಚಿದ್ದಾರೆ. ಕಲಬೆರಕೆ ಆಗುವುದಕ್ಕಿಂತ ಕೊಡತಕ್ಕಂಥದ್ದರಲ್ಲಿಯೇ ವ್ಯತ್ಯಾಸವಾಗಿದೆ. ಏಕೆಂದರೆ. ರೇಷನ್ ಕೊಡುವುದೇ ಸ್ವಲ್ಪವಾಗಿರುವುದರಿಂದ ಅದರಲ್ಲಿ ಕಲಬೆರಕೆ ಮಾಡುವುದಕ್ಕೆ ಸಮಯವೇ ಇರುವುದಿಲ್ಲ. ರೇಷನ್ ಕೊಟ್ಟ ಕೂಡಲೇ ಜನರು ತೆಗೆದುಕೊಂಡು ಹೋಗುತ್ತಾರೆ. ರೇಷನ್ ಕೊಡುತ್ತಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ನಾವು ನೀವು ಮತ್ತು ಅಧಿಕಾರಿಗಳು ಸಹ ನೋಡುತ್ತಿದ್ದಾರೆ. ಮುಂದೆ ಈ ರೀತಿಯಾಗತಕ್ಕಂಥ ಅನ್ಯಾಯಗಳನ್ನು ಸರಿಪಡಿಸುತ್ತೇವೆ.

ಶ್ರೀ ಆರ್.ರೋಷನ್ ಬೇಗ್ :– Food Corporation of Indiaಗೆ ತಾವೇಕೆ ಬ್ಲೇಮ್ ಮಾಡುತ್ತಿದ್ದೀರಿ? ಅವರು ಕೊಡತಕ್ಕಂಥ ಅಕ್ಕಿ. ಗೋಧಿ ಬೇಡವೆಂದು ತಾವು ತಿರಸ್ಕಾರ ಮಾಡಿ. Food Corporation of Indiaದವರು ಕೊಡತಕ್ಕಂಥ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಬಂದು ನಾನು ನ್ಯಾಯಬೆಲೆ ಅಂಗಡಿಯಲ್ಲಿ ಕೊಡುತ್ತೇವೆ. ಅದು ಆ ರೀತಿಯಾಗಿರುತ್ತದೆ. ನಾವೇನು ಮಾಡೋಣವೆಂದು ತಾವು ಹೇಳಿದರೆ ಹೇಗೆ? ಮಾನ್ಯ ಮುಖ್ಯ ಮಂತ್ರಿಯವರು ಕೇಂದ್ರ ಸರ್ಕಾರದ ಮುಂದೆ ಹೋಗಿ ಸತ್ಯಾಗ್ರಹ ಮಾಡೋಣವೆಂದು ಹೇಳುತ್ತಾರೆ. ಆದ್ದರಿಂದ. Food Corporation of India ಮುಂದೆ ನೀವು ಹೋಗಿ ಸತ್ಯಾಗ್ರಹ ಮಾಡಿ.

ಶ್ರೀ ಹೆಚ್. ಹಾಲಪ್ಪ :– ನಾನು ಆ ರೀತಿಯಾಗಿ ಹೇಳಲಿಲ್ಲ. ತಾವು ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ಅವರು ಕೊಡತಕ್ಕಂಥದ್ದನ್ನು ನಾವು ಸರಬರಾಜು ಮಾಡುತ್ತಿದ್ದೇವೆಂದು ಹೇಳಿದ್ದೇನೆ. ನಾನು ಈಗಾಗಲೇ ಹೇಳಿದ ಹಾಗೆ ಅವರದೇ ಆದಂಥ ನಾರ್ಮ್ಸ್ ನಿಗದಿ ಮಾಡಿಕೊಂಡು ಆ ನಾರ್ಮ್ಸ್ ಪ್ರಕಾರವೇ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುತ್ತಿದ್ದಾರೆ. ಅದರಲ್ಲಿ ಕಳಪೆ ಬಂದರೆ ಅವರೇ ಕೊಡುವುದಿಲ್ಲ. ಆದ್ದರಿಂದ. ಗುಣಮಟ್ಟಕ್ಕಿಂತ ಅಲ್ಲಿ ಅವ್ಯವಹಾರಗಳು ಹೆಚ್ಚು ಕಡಿಮೆ ಆಗುತ್ತದೆಂಬುದನ್ನು ನಾನು ಒಪ್ಪುತ್ತೇನೆ. ಆದರೆ. ಕಲಬೆರಕೆ ಆಗುತ್ತದೆಂಬುದನ್ನು ತಾವು ಹೇಗೆ ಹೇಳಿದರೋ ಗೊತ್ತಿಲ್ಲ.

ಶ್ರೀ ಆರ್. ರೋಷನ್ ಬೇಗ್ :– ರೇಷನ್ ಅಂಗಡಿಯಲ್ಲಿಲತಕ್ಕಂಥ ಅಕ್ಕಿಯನ್ನು ನಾನು ನಿಮ್ಮ ಮನೆಗೆ ಕಳುಹಿಸಿ ಕೊಡುತ್ತೇನೆ. ತಾವು ಇವತ್ತು ಅಡಿಗೆ ಮಾಡಿಸುತ್ತೀರಾ.

ಶ್ರೀ ಹೆಚ್. ಹಾಲಪ್ಪ :– ತಾವೇಕೆ ಇಷ್ಟೊಂದು ರೋಷವಾಗುತ್ತೀರಿ? ತಾವು ಹಿರಿಯ ಸದಸ್ಯರು ತಾವು ಏನು ಸಲಹೆ ಕೊಡುತ್ತೀರೋ ಅದನ್ನು ನಾವು ಅನುಷ್ಠಾನ ಮಾಡುತ್ತೇವೆ.

ಶ್ರೀ ಆರ್.ರೋಷನ್ ಬೇಗ್ :– ಹಾಗಾದರೆ. ನಾನು ಸುಳ್ಳು ಹೇಳುತ್ತಿದ್ದೇನೆಂದು ಅರ್ಥವೇ? ನ್ಯಾಯ ಬೆಲೆ ಅಂಗಡಿಯಲ್ಲಿ ಕಲಬೆರಕೆ ಆಹಾರ ಪದಾರ್ಥಗಳು ಸರಬರಾಜು ಆಗುತ್ತಿದೆ ಎಂದು ಈ ಸದನದಲ್ಲಿ ನಾನು ಹೇಳತಕ್ಕಂಥದ್ದು ಸುಳ್ಳು ಮಾಹಿತಿಯೇ?

ಶ್ರೀ ಹೆಚ್. ಹಾಲಪ್ಪ :– ಸುಳ್ಳೆಂದು ನಾನು ಹೇಳುತ್ತಿಲ್ಲ.

ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಕಾರ್ಡುಗಳಲ್ಲಿ ತಾರತಮ್ಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 57 : (225)

ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ (ತೇರದಾಳ್)

ಉತ್ತರಿಸುವ ಸಚಿವರು : ಶ್ರೀ ಹೆಚ್. ಹಾಲಪ್ಪ
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಕ್ರ.ಸಂ.	ಪ್ರಶ್ನೆ
ಅ)	ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಗಳ ವಿತರಣೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.
ಉತ್ತರ	
	ಹೌದು
ಆ)	ಹಾಗಿದ್ದಲ್ಲಿ ಯಾವ ರೀತಿ ಹಾಗೂ ಎಂದಿನಿಂದ ಸರಿಪಡಿಸಲಾಗುವುದು.
ಉತ್ತರ	
	ಅಹವಾಲುಗಳನ್ನು ಪಡೆಯಲಾಗಿದ್ದು ಪರಿಶೀಲಿಸಿ ಅರ್ಹ ಕುಟುಂಬಗಳಿಗೆ ಬಿಪಿಎಲ್ ಪಡಿತರ ಚೀಟಿ ವಿತರಿಸಲಾಗುತ್ತದೆ. ಇತರರಿಗೆ ಎಪಿಎಲ್ ಪಡಿತರ ಚೀಟಿ ನೀಡಲಾಗುವುದು.
ಕ್ರ.ಸಂ.	ಪ್ರಶ್ನೆ
ಇ)	ತೇರದಾಳ ಮತ ಕ್ಷೇತ್ರದಲ್ಲಿ ಬಿಪಿಎಲ್ ಕಾರ್ಡುಗಳನ್ನು ಬೇಡಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು.
ಉತ್ತರ	
	1.18.982
ಕ್ರ.ಸಂ.	ಪ್ರಶ್ನೆ
ಈ)	ಬಂದ ಅರ್ಜಿಗಳನ್ನು ಗುರುತಿಸಿ ಪಡಿತರ ಚೀಟಿಗಳನ್ನು ವಿತರಿಸಲಾಗುವುದೇ ಹಾಗಿದ್ದಲ್ಲಿ ಎಂದಿನಿಂದ ವಿತರಿಸಲಾಗುವುದು?
ಉತ್ತರ	
	ಹೌದು ಈಗಾಗಲೇ ವಿತರಣಾ ಕಾರ್ಯ ಪ್ರಾರಂಭವಾಗಿರುತ್ತದೆ.

ಶ್ರೀ ಸಿದ್ದು ಸವದಿ :– ಮಾನ್ಯ ಅಧ್ಯಕ್ಷರೆ. ನನ್ನ ತೇರದಾಳ ಮತ ಕ್ಷೇತ್ರದಲ್ಲಿ ಬಿ.ಪಿ.ಎಲ್. ಕಾರ್ಡುಗಳು ಬೇಡಿ ಬಂದ ಅರ್ಜಿಗಳ ಸಂಖ್ಯೆ ಎಷ್ಟೆಂದು ಪ್ರಶ್ನೆ ಕೇಳಿದ್ದೆ. 1.18.982 ಗಳಷ್ಟು ಅರ್ಜಿಗಳು ಬಂದಿವೆ ಎಂದು ಉತ್ತರ ಕೊಟ್ಟಿದ್ದಾರೆ. ವಿಶೇಷವಾಗಿ ತೇರದಾಳ ಮತ ಕ್ಷೇತ್ರದಲ್ಲಿ ನೇಕಾರರು ಹೆಚ್ಚಾಗಿದ್ದಾರೆ. ಇಲ್ಲಿ ಕೂಲಿ ಜನ. ಬಡಜನರು ಮತ್ತು ನೇಕಾರರು ಹೆಚ್ಚಾಗಿ ವಾಸವಾಗಿರುವುದರಿಂದ ಇವರೆಲ್ಲರಿಗೂ ಕಾರ್ಡ್ ವಿತರಣೆ ಮಾಡಬೇಕಾಗಿರುವುದರಿಂದ ಬಂದಿರತಕ್ಕಂಥ ಅರ್ಜಿಗಳನ್ನು ಪರಿಶೀಲನೆ ಮಾಡಿ ಯೋಗ್ಯವಿದ್ದರೆ ಎಲ್ಲರಿಗು ಕಾರ್ಡ್ ಕೊಡಿ ಎಂದು ನಾನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ಹಾಲಪ್ಪ :– ಮಾನ್ಯ ಅಧ್ಯಕ್ಷರೆ. ಈಗಾಗಲೇ 5–9 ರಲ್ಲಿ ಅರ್ಜಿಗಳನ್ನು ಕೊಟ್ಟಿದ್ದಾರೆ. ಎಷ್ಟು ಅರ್ಜಿಗಳಿಗೆ ನೀಡಲಾಗುತ್ತದೆಂದು ಈಗಾಗಲೇ ಗುರುತು ಮಾಡಲಾಗಿದೆ. ಈ ಮಾಹಿತಿಯನ್ನೂ ಸಹ ಒದಗಿಸಿಕೊಡುತ್ತೇನೆ.

ಅಧ್ಯಕ್ಷರು :– ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಕರಡಿ ಸಂಗಣ್ಣ ಅಮರಪ್ಪ :– ಮಾನ್ಯ ಅಧ್ಯಕ್ಷರೆ. ನನ್ನದೊಂದು ಪ್ರಶ್ನೆ ಇದೆ.

ಅಧ್ಯಕ್ಷರು :– ಪ್ರಶ್ನೋತ್ತರ ಅವದಿ ಮುಗಿಯಿತು.

ಶ್ರೀ ಕರಡಿ ಸಂಗಣ್ಣ ಅಮರಪ್ಪ :– ಮಾನ್ಯ ಅಧ್ಯಕ್ಷರೆ. ಇದು ಬಹಳ ಮಹತ್ವದ ಪ್ರಶ್ನೆಯಾಗಿದೆ.

ಅಧ್ಯಕ್ಷರು :– ಪ್ರಶ್ನೋತ್ತರ ಅವದಿ ಮುಗಿಯಿತು. ನಾನು ಮತ್ತೆ ಅವಕಾಶ ಕೊಡುವುದಿಲ್ಲ. ನಿಮ್ಮ ಪ್ರಶ್ನೆ ಬಂದಾಗ ನಾನು ನಿಮ್ಮ ಹೆಸರನ್ನು ಕರೆದೆ. ಆದರೆ. ತಾವು ಬಂದಿರಲಿಲ್ಲ. ಈಗ ಪ್ರಶ್ನೋತ್ತರ ಅವದಿ ಮುಗಿಯಿತು. ನಾನು ಮತ್ತೆ ಅವಕಾಶ ಕೊಡುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೆ. ಇನ್ನೆರೆಡು ಬಹಳ ಮುಖ್ಯವಾದ ಪ್ರಶ್ನೆಗಳಿವೆ. ತಾವು ದಯವಿಟ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು :– ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಏನು ಹೇಳುತ್ತಿದ್ದೇನೆಂದರೆ. ಯಾರು ಪ್ರಶ್ನೆ ಕೇಳಿರುತ್ತಾರೆ. ಅವರು ಮಾತ್ರ ಕೇಳಲಿ ಎಂದರೆ. ಉಪ ಪ್ರಶ್ನೆಗಳನ್ನು ಎಲ್ಲರೂ ಕೇಳಿದರೆ ಇದೇ ಆಗುವುದು. ಇಲ್ಲ. ನಾನು ಅವಕಾಶವನ್ನು

ಕೊಡುವುದಿಲ್ಲ. ಪ್ರಶ್ನೋತ್ತರ ಅವದಿ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು. ಆಗುವುದಿಲ್ಲ. ದಯವಿಟ್ಟು ಸಹಕರಿಸಬೇಕು.

ಆ) ಚುಕ್ಕೆ ಗುರುತಿಲ್ಲದ ಲಿಖಿತ ಮೂಲಕ ಉತ್ತರಿಸಲಾದ

ಪ್ರಶ್ನೆಗಳು ಅನುಬಂಧ –1

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) ;– ಲಿಖಿತ ಮೂಲಕ ಉತ್ತರಿಸಲಾದ 5ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :– ಮಂಡಿಸಲಾಗಿದೆ

ಶ್ರೀ ಸಂಗಣ್ಣ ಕರಡಿ :– ನಮಗೆ ಅವಕಾಶವನ್ನು ಕೊಡದಿದ್ದರೆ ನಾವು ಧರಣಿ ಮಾಡಬೇಕಾಗುತ್ತದೆ.

(ಈ ಹಂತದಲ್ಲಿ ಜೆಡಿ(ಎಸ್)ಮಾನ್ಯ ಸಂಗಣ ಕರಡಿ. ಶ್ರೀ ವೆಂಕಟರಾವ್ ನಾಡಗೌಡ. ಶ್ರೀ ಸಿದ್ದರಾಜುರವರ ಸದನದ ಬಾವಿಗೆ ಬಂದರು)

ಅಧ್ಯಕ್ಷರು ;– ನೀವು ಈ ರೀತಿ ಮಾಡುವುದು ಬೇಕಾಗಿಲ್ಲ. ನಿಮಗೆ ಬೇರೆ ರೂಪದಲ್ಲಿ ಅವಕಾಶ ಕೊಡುತ್ತೇನೆ. ಈಗ ಪ್ರಶ್ನೋತ್ತರ ಅವದಿ ಮುಗಿದಿರುವುದರಿಂದ ನಾನು ಚರ್ಚೆಗೆ ಅವಕಾಶವನ್ನು ಕೊಡುವುದಿಲ್ಲ. ನೀವು ಬೇರೆ ರೂಪದಲ್ಲಿ ಕೇಳಿ ಉತ್ತರವನ್ನು ಪಡೆಯಿರಿ. ಕಾಲಿಂಗ್ ಅಟೆನ್‌ಷನ್‌ನಲ್ಲಿ ಕೇಳಿ ಅವಕಾಶ ಕೊಡುತ್ತೇನೆ.

(ಗೊಂದಲ)

No, No, ನಾನು ಕಟ್ಟುನಿಟ್ಟು ಹಾಕಿದ್ದೇನೆ. ಅದನ್ನು ನಾವು ಪಾಲನೆ ಮಾಡಿಕೊಂಡು ಹೋಗಬೇಕಾಗಿದೆ. ಹಾಗಾದರೆ ದಿನವೂ ಇದೆಏ ಆಗುತ್ತದೆ. ಒಂದೂವರೆ ಎರಡು ಗಂಟೆ ಪ್ರಶ್ನೋತ್ತರವನ್ನು ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ನೀವು ನಿಮ್ಮ ಸ್ಥಳಕ್ಕೆ ಹೋಗಿ. Definitely ನೀವು ಬೇರೆ ರೂಪದಲ್ಲಿ ಕೇಳಿ. ಅವಕಾಶವನ್ನು ಮಾಡಿ ಕೊಡುತ್ತೇನೆ. ಆದರೆ ಪ್ರಶ್ನೋತ್ತರ ಅವದಿಯಲ್ಲಿ ಈ ರೀತಿ ಮಾಡುವುದು ಸರಿಯಾದುದು ಅಲ್ಲ. ಮಾನ್ಯ ವೆಂಕಟರಾವ್ ನಾಡಗೌಡರೇ. ನಿಮಗೆ ಅವಕಾಶ ಸಿಕ್ಕಿದೆ. ವೀವು ಈ ರೀತಿ ಮಾಡುವುದು ಸರಿಯಾದುದು ಅಲ್ಲ.

(ಗೊಂದಲ)

ಪ್ರಶ್ನೋತ್ತರ ಅವದಿಯಲ್ಲಿ ಮಾನ್ಯ ಸಿದ್ದು ಸವದಿಯವರದ್ದು ಪ್ರಶ್ನೆ 57ನೇ ನೆಂಬರ್ ಇತ್ತು. ಅದಕ್ಕಾಗಿ ಅವರಿಗೆ ಅವಕಾಶವನ್ನು ಕೊಡಲಾಗಿದೆ. ಅದರ ಬಗ್ಗೆ ವಾದವನ್ನು ಮಾಡುವುದು ಬೇಡ. ನೀವು ಬೇರೆ ರೂಪದಲ್ಲಿ ಕೇಳಿ. ಅವಕಾಶವನ್ನು ಕೊಡುತ್ತೇನೆ. ದಯವಿಟ್ಟು ನೀವು ನಿಮ್ಮ ಸ್ಥಾನಕ್ಕೆ ಹೋಗಿ. ಜೀರೋ ಅವರ್‌ನಲ್ಲಿ ಕೇಳಿ ನಾನು ಕೊಡುತ್ತೇನೆ. ಗಂಭೀರವಾದ ವಿಷಯ ಇದ್ದರೆ ಬೇರೆ ರೂಪದಲ್ಲಿ Definitely ಕೊಡುತ್ತೇನೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ. ನಾವು ಶಿಸ್ತಿಗೆ ಒಳಪಡೋಣ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹೋದರು)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ. ನಿಮ್ಮಲ್ಲಿ ಒಂದು ಮನವಿ. ನನ್ನ ಪ್ರಶ್ನೆ ಆಗಿ ಹೋಗಿದೆ. ನಮ್ಮ ಮನವಿ ಏನೆಂದರೆ. ನೀವು ಪ್ರಶ್ನೆ ಕೇಳುವವರಿಗೆ 5 ನಿಮಿಷವನ್ನು ಸೀಮಿತ ಮಾಡಬೇಕು. ಅದರಲ್ಲಿ ಅರ್ಧ ಗಂಟೆ ಚರ್ಚೆ ಮಾಡಿ ಈಗ ಒಂದು ಗಂಟೆಯಾಯಿತು ಎಂದರೆ. ಪ್ರಶ್ನೆ ಇರುವವರಿಗೆ ತೊಂದರೆಯಾಗುತ್ತದೆ.

ಅಧ್ಯಕ್ಷರು ;– ನಾನು ಮಾಡಿಲ್ಲ. ಆದರೆ ಉಪಪ್ರಶ್ನೆಗಳನ್ನು ಕೇಳುವವರು ನೀವು ಅಲ್ಲವೇ?

ಶ್ರೀ ಹೆಚ್.ಸಿ. ಬಾಲಕೃಷ್ಣ : ನಾವು ಕೇಳುತ್ತೇವೆ. ನೀವು ಅದನ್ನು ಕಂಟ್ರೋಲ್ ಮಾಡಿ.ಅದಕ್ಕೆ ನಾವೂ ಒಪ್ಪಿಕೊಳ್ಳುತ್ತೇವೆ. ಎಲ್ಲರೂ ಆ ರೀತಿ ಮಾಡಿದರೆ ಹೇಗೆ?

ಅಧ್ಯಕ್ಷರು ; ಕಂಟ್ರೋಲ್ ಮಾಡಿಯೇ ಇಷ್ಟು ಇದೆ. Definitely ಮಾಡೋಣ.

ಶ್ರೀ ಹೆಚ್. ಸಿ. ಬಾಲಕೃಷ್ಣ ; ಅದನ್ನು ದಯಮಾಡಿ ಮಾಡಿ.

ಅಧ್ಯಕ್ಷರು ;– ಮಾಡೋಣ ಜೀರೋ ಅವರ್‌ನಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ ; ರಾಜ್ಯದಲ್ಲಿ ಉಂಟಾದ ಡೀಸೆಲ್ ಮತ್ತು ರಸಗೊಬ್ಬರ ಅಭಾವದ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ವಿರೋಧ ಪಕ್ಷದ ನಾಯಕರು) ;–

ಮಾನ್ಯ ಅಧ್ಯಕ್ಷರೆ. ಈ ರಾಜ್ಯದಲ್ಲಿ ಇತ್ತೀಚೆಗೆ ಡೀಸೆಲ್ ಮೇಲಿನ ಅಭಾವ ಉಂಟಾಗಿದೆ. ಕಳೆದ ಒಂದು ವಾರದಿಂದ ರಾಜ್ಯದಲ್ಲಿ ಈ ಡೀಸೆಲ್ ಕೊರತೆಯಿಂದ ಅನೇಕ ಕಡೆ ಈ transport ಆಗತಕ್ಕಂಥ ಸಾಮಾನುಗಳು. ಸರಕುಗಳು ಎಲ್ಲವೂ ಕೂಡ ನಿಂತು ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಅದೂ ಅಲ್ಲದೇ ನಗರದ ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಡೀಸೆಲ್‌ಗಾಗಿ ದೊಡ್ಡ ಕ್ಯೂ ನಿಂತಿದೆ. ಆ ಕ್ಯೂನಿಂದ ಣಡಿಚಿಜಿuಛಿ ಗೆ ಕೂಡ ತೊಂದರೆ. ಹೀಗಾಗಿ ವಿಶೇಷವಾಗಿ ಬೆಂಗಳೂರಿನ ಎಲ್ಲಾ ರಿಂಗ್‌ರೋಡ್‌ನಿಂದ ಹಿಡಿದುಕೊಂಡು ಬೆಂಗಳೂರಿನ ಒಳ ರಸ್ತೆಗಳಿಗೂ ಕೂಡ ತೊಂದರೆ. ಇದು ಒಂದು ಕಡೆಯಾಗಿದೆ. ಎರಡನೆಯದಾಗಿ. ಹಳ್ಳಿಗಳಲ್ಲಿ factorರಿಗೆ use ಮಾಡತಕ್ಕಂಥ ಡೀಸೆಲ್‌ಗೂ ಕೊರತೆ ಇದೆ. ಈಗಾಗಲೇ ಒಂದು ಬಿತ್ತಣಿಕೆ ಸೀಸನ್ ಇದ್ದ ಕಾರಣ. ಮಳೆ ಅನೇಕ ಕಡೆ ಬಂದ ಕಾರಣ ಎಲ್ಲಾ ಕಡೆ ಡೀಸೆಲ್ ಬೇಡಿಕೆ ಹೆಚ್ಚಿನ ಪ್ರಮಾಣದಲ್ಲಿ ಇವತ್ತು ಇದೆ. ಇಷ್ಟೊಂದು ಇದ್ದರೂ ಕೂಡ ಇದರ ಬಗ್ಗೆ ವಿಶೇಷವಾಗಿ ಆ ಇಲಾಖೆಯವರು ಆಸಕ್ತಿಯನ್ನು ವಹಿಸಿ ಎಲ್ಲೆಲ್ಲಿ ಡೀಸೆಲ್ ಇದೆ. ಇದ್ದರೂ ಕೂಡ ಸರಬರಾಜು ಆಗುತ್ತಿಲ್ಲ ಅಥವಾ ಕೊರತೆ ಇದೆ. ಕೊರತೆ ಇದ್ದರೆ ಅದನ್ನು ತರಿಸತಕ್ಕಂಥದ್ದು ಇಂದು ಮಾಡಬೇಕಾಗಿತ್ತು. ಆದರೆ ಇದನ್ನು ಮಾಡುತ್ತಿಲ್ಲ. ಆ ಇಲಾಖೆಯವರು ಇದರ ಬಗ್ಗೆ ಆಸಕ್ತಿ ವಹಿಸತಕ್ಕಂಥದ್ದು ಬಹಳ ಮುಖ್ಯ. ಇಲ್ಲದಿದ್ದರೆ ಇದು ಕೂಡ ಗೊಬ್ಬರ ಕೊರತೆಯಿಂದ ಯಾವ ರೀತಿಯಾಗಿ ಗೋಲಿಬಾರ್ ಆಯಿತು. ಅದೇ ರೀತಿಯಿಂದ ಎಲ್ಲಾ ಕಡೆ ಗದ್ದಲ. ಗೊಂದಲ. ಗಲಾಟೆ ಆಗುತ್ತದೆ. ಅದಕ್ಕಾಗಿ ಕಂಪನಿಯವರನ್ನು ಇಲ್ಲಿಗೆ ಕರೆಸಿ ಮಾತನಾಡಿ. ಕಂಪನಿಗಳ M.D. Chairman Vice-Chairman ಕೆಲವರು ಇಲ್ಲಿಯೇ ಇದ್ದಾರೆ. ಎಲ್ಲಾ ಕಂಪನಿಗಳ ಮುಖ್ಯಸ್ಥರನ್ನು ಕರೆಸಿ. ಏಕೆ ಈ ಕೊರತೆ ಇದೆ. ಏಕೆ ಪೆಟ್ರೋಲ್ ಬಂಕ್‌ನವರು ಕೊಡುತ್ತಿಲ್ಲ. ಇಲ್ಲದಿದ್ದರೆ ಅದನ್ನು suspend ಅಥವಾ cancel ಮಾಡಿ. ಈ ರೀತಿಯಾಗಿ ಪ್ರತಿಯೊಬ್ಬರಿಗೆ scarcity create ಮಾಡಿ. ಈಗಾಗಲೇ ಒಂದು ಕಡೆ Infication ಹೊಡೆತ. ಎರಡನೆಯದು ಡೀಸೆಲ್ ಸ್ಟಾಕ್ ಇಲ್ಲ. ಮೂರನೇ ಕಡೆ ಗೊಬ್ಬರದ ಕೊರತೆ. ಹೀಗಾಗಿ ಇವೆಲ್ಲಾ ಏನಾಗುತ್ತವೆಂದರೆ. ಗೊಂದಲಕ್ಕೆ ಈಡಾಗಿ ನಾಳೆ Law and order Problem ಎಲ್ಲಾ ಕಡೆ ಕೂಡ ಆಗುತ್ತದೆ. ಅದಕ್ಕಾಗಿ ಇದರ ಬಗ್ಗೆ ತಕ್ಷಣ ಒಂದು ಕ್ರಮ ಜರುಗಿಸತಕ್ಕಂಥದ್ದು ಬಹಳ ಅವಶ್ಯ. ಇದು ಮೊದಲನೇ ವಿಷಯ. ಎರಡನೆಯದಾಗಿ. ಬರಪೀಡಿತ ಪ್ರದೇಶದ ಪರಿಹಾರದ ಬಗ್ಗೆ ಇವತ್ತು ನಾನು ಕ್ಯಾಬಿನೆಟ್‌ನಲ್ಲಿ ಓದಿದೆ. 5–6 ಜಿಲ್ಲೆಗೆ ನಾವು ಘೋಷಣೆ ಮಾಡಿ ಪುನಃ 8 ದಿವಸದಲ್ಲಿ ನಾವು ನಿರ್ಣಯವನ್ನು ತೆಗೆದುಕೊಳ್ಳತ್ತೇವೆ ಎನ್ನತಕ್ಕಂಥದ್ದು ಹೇಳಿದ್ದಾರೆ. ನನಗೆ ಅರ್ಥವಾಗುತ್ತಿಲ್ಲ. ಯಾವಾಗ ನಿಮ್ಮ ನೋಟಿಸ್‌ಗೆ ಬಂದಿದೆ. ಮಳೆ ಕೊರತೆ

0-227-10

ಇದೆ ಎನ್ನತಕ್ಕಂಥದ್ದು ಗೊತ್ತಿದೆ. ಸುಮಾರು ಉತ್ತರ ಕರ್ನಾಟಕದ 6 ಜಿಲ್ಲೆಗಳಲ್ಲಿ 60 ಕ್ಕಿಂತಲೂ ಹೆಚ್ಚು ಮಳೆ ಕೊರತೆ ಇದೆ. ಅದರ ಬಗ್ಗೆ ನೀವೇ ಹೇಳಿದ್ದೀರಿ. ಪತ್ರಿಕೆಯಲ್ಲಿ ಕೂಡ ಬಂದಿದೆ. ನಮ್ಮ reinfall statistic ಪ್ರಕಾರ ಇವತ್ತಿನ ದಿವಸ north interior ಕರ್ನಾಟಕದಲ್ಲಿ 55. ಮಲೆನಾಡಿನಲ್ಲಿ 41. coastal ನಲ್ಲಿ –37. ಇಡೀ ರಾಜ್ಯದಲ್ಲಿ –37 ಕೊರತೆ ಇದೆ. ಅದರಲ್ಲಿ ವಿಶೇಷವಾಗಿ ಅತ್ಯಂತ ಕಡೆ ಮಳೆ ಬೀಜಾಪೂರದಲ್ಲಿ–86. ರಾಯಚೂರು –81. ಬಾಗಲಕೋಟೆಯಲ್ಲಿ –67. ಕೊಪ್ಪಳದಲ್ಲಿ –62. ಬಳ್ಳಾರಿಯಲ್ಲಿ –61 ಅಂದರೆ ವಾಡಿಕೆಗಿಂತಲೂ ಏನು ಮಳೆ ಬರಬೇಕು ಅದಕ್ಕಿಂತಲೂ actual ಕಡಿಮೆ ಮಳೆ ಬಂದಿರುವುದು ಈ, ಣಚಿಣಖ–ಣಬಳಿ ನಿಂದ 86.81.67.62.61 ಇದು 6 ಜಿಲ್ಲೆಯಲ್ಲಿ ಇಷ್ಟೊಂದು ಕೊರತೆ ಇದೆ ಎನ್ನತಕ್ಕಂಥದ್ದು ಗೊತ್ತಿದ್ದರೂ ಕೂಡ ಪುನಃ ನೀವು 8 ದಿವಸ ಮುಂದಕ್ಕೆ ಹಾಕುತ್ತೇವೆಂದು ಹೇಳಿದರೆ ಇದು ನಿಜವಾಗಲೂ ನೀವು ಜನರಿಗೆ ಸಹಾಯ ಮಾಡಿದಂತಾಗುವುದಿಲ್ಲ. ಇವತ್ತು ಕರೀಫ್ ಹೋಗಿ ಬಿಟ್ಟಿದೆ. ಅಲ್ಲಿ ರಬೀ ಕ್ರಾಪ್‌ನ್ನು ಹಾಕುವಂಥ ಪ್ರಶ್ನೆಯೇ ಇಲ್ಲ. ವಿಶೇಷವಾಗಿ ಈ ಗುಲ್ಬಾರ್ಗ. ಬೀದರ್. ರಾಯಚೂರು. ಬಿಜಾಪುರ. ಬಾಗಲಕೋಟೆ ಏನು ಒಂದು ಸಾರಿ ಬೆಳೆಯನ್ನು ಹಾಕುತ್ತಾರೋ ಹೊರತು ಪುನಃ ಕರೀಫ್‌ಗೆ ಹೋಗಬೇಕು ಹೊರತಾಗಿ ರಬೀ ಬರತಕ್ಕಂಥದ್ದು ಇಲ್ಲ. ಕೆಲವು ಭೂಮಿಗಳಲ್ಲಿ ನೀರಿನ ವ್ಯವಸ್ಥೆ ಇಲ್ಲ. ಬೇರೆ ಏನೂ ಇಲ್ಲ. ಅಥವಾ ಜೋಳ ಬೆಳೆಯುವಂತೆ ಇಲ್ಲ. ಅಥವಾ pulse ಹಾಕಬೇಕೆಂದರೆ ಅದು ಕೂಡ ಆಗುವುದಿಲ್ಲ. ಅವರು ಬೆಳೆಯತಕ್ಕಂಥದ್ದು ತೊಗರಿ. ಸಜ್ಜೆ. ಉದ್ದು. ಹೆಸರು ಇಂತಹ ಬೆಳೆಗಳನ್ನು ಮಾತ್ರ ಬೆಳೆಯಬಹುದು. ಬಾಕಿ ಟೈಮ್‌ನಲ್ಲಿ ಅವರು ಒಂದು ವರ್ಷ ಕಾಯಬೇಕು. ಇಂತಹ ಕಡೆ ಪ್ರದೇಶಗಳಲ್ಲಿ –86 ಎಂದ ಮೇಲೆ ನೀವೆ ಯೋಚನೆ ಮಾಡಿ ನೋಡಿ. ನೀವು ಏಕೆ withheled ಮಾಡಿದಿರಿ ಒಂದು. ಆಮೇಲೆ ಅಂತಹ ವಿಷಯಗಳನ್ನು ಇಲ್ಲಿ ತಂದು statement ಮಾಡಿ ಇಡೀ ಸದನದ ಗಮನಕ್ಕೆ ತಂದು ಇದು ಕೊರತೆ ಇದೆ. ಅದಕ್ಕಾಗಿ ನಾವು ಇಂತಹ 6 ಜಿಲ್ಲೆಗಳನ್ನು ಘೋಷಣೆ ಮಾಡುತ್ತೇವೆ ಅಥವಾ ಸುಮಾರು 107 ತಾಲ್ಲೂಕಿನಲ್ಲಿ ಈ problem ಇದೆ. ಅದಕ್ಕಾಗಿ ಇಲ್ಲಿ ಘೋಷಣೆ ಮಾಡುತ್ತೇವೆಂದು ಹೇಳುವುದು ಇಲ್ಲ ಉತ್ತಮ. ನಾನು ಮೊದಲೇ ನಿಮಗೆ ಹೇಳಿದೆ. ನೀವೂ ಹೇಳಿದಿರಿ. ಸದನ ನಡೆದಾಗ ಇಂತಹ ವಿಶೇಷವಾದಂತಹ anouncement ಗಳನ್ನು ಸದನದಲ್ಲಿ ಮಾಡತಕ್ಕಂಥದ್ದು ಮಾನ್ಯ ಮುಖ್ಯಮಂತ್ರಿಗಳಾಗಲಿ. ಕೃಷಿ ಸಚಿವರಾಗಲಿ. ರೆವಿನ್ಯೂ ಮಂತ್ರಿಗಳಾಗಲಿ ಒಟ್ಟಿನಲ್ಲಿ ಸಂಬಂಧಪಟ್ಟವರು ಮಾಡುವುದು ಉತ್ತಮ. ನೀವು ಒಂದೊಂದು ಹೇಳಿಕೆಯನ್ನು

ಕೊಡುತ್ತಾ ಹೋದರೆ ಆಗ ನಮಗೆ ಗೊತ್ತಾಗುತ್ತದೆ. ಸದನದಲ್ಲಿ ಏನು ಕೇಳಬೇಕು ಅದನ್ನು ನಾವು ಕೇಳುವುದಕ್ಕೂ ಆಗುವುದಿಲ್ಲ. ನೀವು ಹೇಳುವುದಕ್ಕೂ ಆಗುವುದಿಲ್ಲ. ಅದಕ್ಕೆ ಒಂದು ಸಾರಿ ಅಧ್ಯಕ್ಷರು ಈಗಾಗಲೇ ಹೇಳಿದ್ದಾರೆ. ಸೌಜನ್ಯಕ್ಕಾಗಿ ಅದು privilege ಆಗದೇ ಇರಬಹುದು. ಆದರೆ ನಾವು ಹಾಕಿಕೊಂಡಿರತಕ್ಕಂತಹ precedent ಪ್ರಕಾರ. ನಿಯಮದ ಪ್ರಕಾರ ಯಾವುದೇ ಘೋಷಣೆಗಳನ್ನು ಮಾಡಬೇಕಾದರೂ ಕೂಡ. ನಿಮ್ಮ Cabinet ಇದ್ದರೂ ಕೂಡ ಯಾವುದೇ ತೀರ್ಮಾನವನ್ನು ತೆಗೆದುಕೊಂಡಿರುವುದನ್ನು ಸದನ ನಡೆದಾಗ ಸದನದ ಮುಖಾಂತರ ಹೇಳತಕ್ಕಂಥದ್ದು ಬಹಳ ಮುಖ್ಯ. ಅದನ್ನು ಬಿಟ್ಟು ನೀವು Publicity ಗೋಸ್ಕರ ಮೊದಲೇ ಹೇಳುವುದು. ಆಮೇಲೆ ಇಲ್ಲಿ ನಮ್ಮ ಸದನಕ್ಕೆ ತಿಳಿಸುವುದು. ಸದನ ಇದ್ದರೂ ಕೂಡ ನಾವೆಲ್ಲಾ ಪತ್ರಿಕೆ ಮುಖಾಂತರ ನೋಡಿಕೊಳ್ಳುವುದು. ಇಂತಹ ದೊಡ್ಡ ತಪ್ಪುಗಳನ್ನು ತಾವು ದಯವಿಟ್ಟು ಇನ್ನು ಮೇಲಾದರೂ ಮಾಡಬೇಡಿ. ಇದು ಎರಡನೇ ಸಲ. ಇದಕ್ಕಿಂತ ಜಾಸ್ತಿ ನಾನು ಹೇಳುವುದಕ್ಕಾಗುವುದಿಲ್ಲ. ಇದಕ್ಕೂ ಮಿತಿ ಮೀರಿ ನಾವು ಮಾಡುತ್ತೇವೆ ಎಂದರೆ rules ಬೇಕಾಗಿಲ್ಲ. regulation ಬೇಕಾಗಿಲ್ಲ. ನಾವು ಹಾಕಿಕೊಂಡಿರುವ precedents ಕೂಡ ಬೇಕಾಗಿಲ್ಲ. ನಿಮ್ಮ ಮನಸ್ಸಿಗೆ ಬಂದಂತೆ ನೀವು ಮಾಡಿ. ಇವತ್ತಿನ ದಿವಸ ಅನೇಕ ಕಡೆ ಬರ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಬೇಕು. ಹಣ ಬಿಡುಗಡೆ ಮಾಡಬೇಕು. ಕೆಲವು ಕಡೆ ಕುಡಿಯುವ ನೀರಿಗೆ ಹಣ ಕೊಡಬೇಕು. ಇವೆಲ್ಲಾ ಕೂಡ ಇದೆ. ದಯವಿಟ್ಟು ಈ ಎರಡೂ ಪ್ರಮುಖ ವಿಚಾರ. ಈಗಾಗಲೇ ಗೊಬ್ಬರದ ಬಗ್ಗೆ ಚರ್ಚೆಯಾಗಿದೆ ಮತ್ತು ಬಿ.ಪಿ.ಎಲ್. ಕಾರ್ಡ್ ಬಗ್ಗೆ ಮಾನ್ಯ ಹಾಲಪ್ಪ ಅವರು ಕೂಡ ಪ್ರಸ್ತಾಪ ಮಾಡಿದ್ದಾರೆ. ಇವೆಲ್ಲವೂ ಕೂಡ ಅತ್ಯಂತ ಅವಶ್ಯಕತೆ ಇರತಕ್ಕಂತಹ ವಸ್ತುಗಳು ಮತ್ತು ಇದರ ಮೇಲೆ ನಾವೆಲ್ಲರೂ ಕೂಡ ಅವಲಂಬಿತರಾಗಿದ್ದೇವೆ. ಒಂದು ಕಡೆ ಬಡವರಿಗಾಗಿ ಇರುವ ಬಿ.ಪಿ.ಎಲ್ ಕಾರ್ಡ್ ಇಲ್ಲ. Food Grains ಸರಬರಾಜು ಮಾಡತಕ್ಕಂಥದ್ದು. ರೈತರಿಗೆ ಗೊಬ್ಬರದ ಪ್ರಶ್ನೆ. ಇನ್ನೊಂದು ಕಡೆ ಬರಗಾಲದಿಂದ ತತ್ತರಿಸುತ್ತಿರವುದು. ಮೂರನೆಯದಾಗಿ. ಅವಶ್ಯಕತೆ ಇಲ್ಲುವಂತಹ ಡೀಸೆಲ್. ಇವೆಲ್ಲದರ ಕೊರತೆಯಿಂದ ಇವತ್ತು ಜನರು ತೊಂದರೆಗೀಡಾಗಿದ್ದಾರೆ. ಅದಕ್ಕೆ ಇದನ್ನು ಬಜೆಟ್‌ನಲ್ಲಿ ಸರ್ವೇಸಾಮಾನ್ಯವಾಗಿ ಅವರು ಮಾತನಾಡುತ್ತಾರೆ. ಆದರೆ. ನಾವು ನಿಮ್ಮ ಅನುಮತಿ ಪಡೆದು ವಿಶೇಷವಾದಂತಹ ವಿಷಯಗಳನ್ನು ಏಕೆ ಪ್ರಸ್ತಾಪ ಮಾಡಿದ್ದೇವೆ ಎಂದರೆ. ರಾಜ್ಯದ ಗಮನವನ್ನು ಸೆಳೆಯಲು ಅಥವಾ ರಾಜ್ಯದ ಜನತೆಯ ಗಮನವನ್ನು ಸೆಳೆಯಬೇಕು ಅನ್ನತಕ್ಕಂತಹ ದೃಷ್ಟಿಯಿಂದ ಅಲ್ಲ. ಅವರ ಸಮಸ್ಯೆಗಳಿಗೆ ಸರ್ಕಾರ

ಸ್ಪಂದಿಸುತ್ತದೆ ಮತ್ತು ಸದನದಲ್ಲಿರತಕ್ಕಂತಹ ಎಲ್ಲಾ ಮಾನ್ಯ ಸದಸ್ಯರೂ ಕೂಡ ಈ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ಕೊಡುತ್ತಾರೆಂದು ಜನರೂ ಕೂಡ ನಿರೀಕ್ಷೆ ಮಾಡುತ್ತಾರೆ. ಆದುದರಿಂದ. ದಯವಿಟ್ಟು ನಾನು ಏನು 2–3 ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಇದರ ಬಗ್ಗೆ ಸರ್ಕಾರದ ತಕ್ಷಣ ಕ್ರಮ ಏನು? ಪ್ರತಿಯೊಂದಕ್ಕೂ ಮೀಟಿಂಗ್ ಕರೆದು ತೆಗೆದುಕೊಳ್ಳಬೇಕೆಂದು ಇಲ್ಲ. ಈಗ ಮೀಟಿಂಗ್ ಕರೆಯುವ ಅವಶ್ಯಕತೆ ಯಾರಿಗೆ ಇದೆ? ಡೀಸೆಲ್ ಕಂಪನಿ. ಪೆಟ್ರೋಲ್ ಕಂಪನಿಯ ಮಾಲೀಕರನ್ನು ಕರೆದು ಮೀಟಿಂಗ್ ಮಾಡಿ. ಆಮೇಲೆ BPl card ಬಗ್ಗೆ discussion ಮಾಡಲು ಅರ್ಧ ಗಂಟೆ ಕೊಟ್ಟಿದ್ದೀರಿ. ಆದರೂ ಕೂಡ ನಿಮ್ಮ ಪ್ರಣಾಳಿಕೆಯಲ್ಲಿ income enhance 75 ಸಾವಿರದಷ್ಟು ಮಾಡುತ್ತೀರೆಂದು ಹೇಳಿದ್ದೀರಿ. ಬಿ.ಪಿ.ಎಲ್. ಕಾರ್ಡ್ holder ಅವರ incomeನ್ನು ಸುಮಾರು 70–75 ಸಾವಿರಕ್ಕೆ enhance ಮಾಡಿದ್ದೀರಿ. ಅಂದರೆ ಈಗ ಹೆಚ್ಚು ಕಡಿಮೆ 100% ಎಲ್ಲಾ BPL ಆಗಿಬಿಡುತ್ತಾರೆ. ಆ 100% BPL ಆದರೆ ನಿಮ್ಮ ಹತ್ತಿರ ಹಣ ಇದೆಯೇ? ಅದು ಕೊಡುವುದಕ್ಕೆ ಎಷ್ಟು? quantity ಎಷ್ಟು ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಸಧ್ಯಕ್ಕೆ ಅದನ್ನು ನೀವು ಅನುಷ್ಠಾನಕ್ಕೆ ತಂದಿಲ್ಲ. ಆದುದರಿಂದ ನಾನು ಅದರ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಇರತಕ್ಕಂತಹ ವ್ಯವಸ್ಥೆಯಲ್ಲಿಯೇ ನಾವು ಏನು ಮಾಡಬೇಕು? ಅಲ್ಲಿ ಏನು ಸುಧಾರಣೆ ಮಾಡಬಹುದು? ಅದನ್ನು ಇವತ್ತು ಜನರಿಗೆ ಹೇಳತಕ್ಕಂತಹ ಅವಶ್ಯಕತೆ ಇದೆ. ನಾವು ಹೋದಾಗಲೂ ಕೂಡ ಈ BPL ಕಾರ್ಡ್‌ಗಂತೂ ಅಷ್ಟೇ ಕಷ್ಟ. ಅದು ಹೋಯಿತು. ಈಗ ಸಣ್ಣಪುಟ್ಟ ವಿಷಯಗಳು ಗೊಬ್ಬರ. ಡೀಸೆಲ್ ಕೂಡ ಬರುತ್ತಿವೆ ಮತ್ತು ವಿಶೇಷವಾಗಿ 6 ಜಿಲ್ಲೆಗಳಲ್ಲಿ ಬರಗಾಲ ತಲೆದೂರಿದೆ. ನೀವು ಕೂಡ ಅದನ್ನು ಗುರುತುಪಡಿಸಿದ್ದೀರಿ. ನಾನು ಕೂಡ ಆ statistic ನ್ನು ನಿಮ್ಮ ಮುಂದಿಟ್ಟಿದ್ದೇನೆ. ಇದರ ಬಗ್ಗೆ ತಾವು ಗಂಭೀರವಾಗಿ ಚಿಂತನೆ ಮಾಡಿ ಹಾಗೂ ತಾವು ಇದರ ಬಗ್ಗೆ ಯಾವ ರೀತಿಯ ಕ್ರಮವನ್ನು ಜರುಗಿಸುತ್ತೀರಿ? ಎಷ್ಟು ಹಣ ಬರಗಾಲಕ್ಕೆ ಬಿಡುಗಡೆ ಮಾಡುತ್ತೀರಿ? ಡೀಸೆಲ್ control ಮಾಡುವುದಕ್ಕೆ ಮತ್ತು ಸಿಗುವುದಕ್ಕೆ ಯಾವ್ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ? ಗೊಬ್ಬರಕ್ಕಾಗಿ 250 ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದ್ದೀರಿ ಅದಕ್ಕೆ ನಾನು ನಿಮಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಏಕೆಂದರೆ. ಬೇರೆ ಬೇರೆ ರಾಜ್ಯಗಳು ಇವತ್ತು ಗೊಬ್ಬರವನ್ನು ಯಾವ ರೀತಿಯಾಗಿ ತರಿಸಿಕೊಂಡಿದ್ದಾರೆಂದು ನಿಮ್ಮ ಆಫೀಸರ್‌ಗಳನ್ನು ಕೇಳಿ. ಕೆಲವು ಸಲ ಏನಾಗುತ್ತದೆ ಎಂದರೆ ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ ಸಿಟ್ಟು ಬರುತ್ತದೆ. ಕೆಲವು ಸಲ ಅಧಿಕಾರಿಗಳು ತಮ್ಮ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಪದೇ ಪದೇ ಅದನ್ನೇ

ಹೇಳುತ್ತಿರುತ್ತಾರೆ. ಮಹಾರಾಷ್ಟ್ರದವರು ನೇರವಾಗಿ 2.000 ಕೋಟಿ ರೂಪಾಯಿ worth fertilizers ಗಳನ್ನು ಖರೀದಿಸಿ ಮಾಡಿಕೊಂಡರು. ಆಂಧ್ರಪ್ರದೇಶದವರು ಸಾವಿರ ಕೋಟಿ ರೂಪಾಯಿ ಕೊಟ್ಟು ತಕ್ಷಣ ತಂದುಕೊಂಡರು. ನೀವು ಹೇಳಿದ ಹಾಗೆ ಮಧ್ಯಪ್ರದೇಶದಲ್ಲಿಯೂ ಕೂಡ ಹಣ ಕೊಟ್ಟಿದ್ದರು. ಅವರಿಗೆ ಮಾತ್ರ ಕೊಟ್ಟಿದ್ದಾರೆ. ನಮಗೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಹೀಗೆಲ್ಲಾ ಇರುವಾಗ ನಮ್ಮಲ್ಲಿ ಏನೋ co-ordination ಕೊರತೆ ಇರಬಹುದು. ಅಥವಾ ನಮ್ಮ ಅಧಿಕಾರಿಗಳು ಅನುಷ್ಠಾನಕ್ಕೆ ತರಲು ಏನೇನು ಪ್ರಯತ್ನ ಮಾಡಬೇಕು ಅವರ ಪ್ರಯತ್ನ ಇಲ್ಲದೇನೆ ಇರಬಹುದು. ಏಕೆಂದರೆ. ಅನೇಕ ಸಾರಿ ಎಲ್ಲಾ ಗುಟ್ಟುಗಳು ಅವರಿಗೆ ಗೊತ್ತಿರುತ್ತವೆ ಮತ್ತು ಅದನ್ನು ಅವರು ಮಾಡಲಿಲ್ಲವೆಂದರೆ ಬಹುಶಃ ಅವರು ನಿಮಗೆ ಸಹಾಯ ಮಾಡಲು ತಯಾರಿಲ್ಲವೆಂದಾಗುತ್ತದೆ. ಆದುದರಿಂದ ದಯವಿಟ್ಟು ಇದರ ಕಡೆ ಗಮನ ಕೊಟ್ಟು. ತಮ್ಮ ಸ್ಪಷ್ಟವಾದ ನಿಲುವು ಅಷ್ಟೆ ಅಲ್ಲ. ಇದಕ್ಕೆ ಪರಿಹಾರವನ್ನು ತಾವು ತಿಳಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು ; ಮಾನ್ಯ ಜಯಚಂದ್ರರವರೇ. ಡೀಸೆಲ್ ಬಗ್ಗೆ ಕೇಳಬೇಕೆಂದು ನೋಟೀಸ್ ಕಳುಹಿಸಿದ್ದೀರಿ ಈಗ ಇದರ ಬಗ್ಗೆ ಕೇಳಿ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಈಗಾಗಲೇ ನಾನು ಮೂರು ದಿವಸಗಳ ಹಿಂದೆ ಡೀಸೆಲ್ ಕೊರತೆಯ ಬಗ್ಗೆ ವಿವರಿಸಿ ಹೇಳಿದ್ದೇನೆ ಹಾಗೂ ಈ ಪರಿಸ್ಥಿತಿಯ ಬಗೆ ನಮ್ಮ ನಾಯಕರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಡೀಸೆಲ್ ಕೊರತೆ ಏನಾಯಿತು ಎನ್ನುವುದು ನಮಗೆ ಅರ್ಥವಾಗದಂತಹ ವಿಚಾರ. ಇವತ್ತು ಯಾವುದೇ ಪೆಟ್ರೋಲ್ ಬಂಕ್. ಡೀಸೆಲ್ ಬಂಕ್ ಹತ್ತಿರ ಹೋದರೂ ಫರಲಾಂಗ್‌ನಷ್ಟು ಜನರು ಸಾಲು ಸಾಲಾಗಿ ನಿಂತಿರುವ ದೃಶ್ಯ ಸರ್ವೇಸಮಾನ್ಯವಾಗಿದೆ. ಈಗ ನಮ್ಮ ತಾಲ್ಲೂಕಿನಲ್ಲೂ ಏನಾಗಿದೆ ಎಂದರೆ ಪೋಲೀಸರು ಹೋಗಿ ಪೆಟ್ರೋಲ್ ಬಂಕ್‌ನ ಹತ್ತಿರ ನಿಂತು ರೇಷನ್ ಸಿಸ್ಟಂನಲ್ಲಿ ಒಂದೊಂದು ಟ್ರಾಕ್ಟರ್‌ಗೆ 20–20 ಲೀಟರ್ ಹಾಕಿ ಕಳುಹಿಸುವ ಕೆಲಸವನ್ನು ಕಳೆದ ಎರಡು ದಿವಸದಿಂದ ಮಾಡುತ್ತಿದ್ದಾರೆ. ಇದು ಏಕೆ ಹೀಗಾಯಿತು ಎನ್ನುವುದನ್ನು ಸರ್ಕಾರ ಉತ್ತರಿಸಬೇಕು ಮತ್ತು ಪರಿಸ್ಥಿತಿಯನ್ನು ಸುಧಾರಿಸಬೇಕೆಂಬ ರೀತಿಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ.

ಶ್ರೀ ಹೆಚ್. ಹಾಲಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು) ; ಸನ್ಮಾನ್ಯ ಅಧ್ಯಕ್ಷರೆ. ವಿರೋಧ ಪಕ್ಷದ

ನಾಯಕರು ಹಾಗೂ ಇನ್ನಿತರ ಮುಖಂಡರು. ಸದಸ್ಯರು ಹೇಳಿದಂತೆ ಸ್ವಲ್ಪ ಡೀಸೆಲ್‌ನ ಅಬಾವ ಕಂಡು ಬಂದಿದೆ. ಅದರ ಸಂಪೂರ್ಣ ಮಾಹಿತಿ ಪಡೆದು ಅವರಿಗೆ ಒದಗಿಸುತ್ತೇನೆ. ಆದರೂ ಮಾಹಿತಿ ಬಂದ ಪ್ರಕಾರ ಕಳೆದ ವರ್ಷಕ್ಕಿಂತ ಏಕಾಏಕಿ ಶೇಕಡ 50 ಪರ್ಸೆಂಟ್ ಬೇಡಿಕೆ ಜಾಸ್ತಿಯಾಗಿದೆ. ಕೇಂದ್ರ ಸರ್ಕಾರದ ಪೆಟ್ರೋಲಿಯಂ ಸಚಿವರಿಗೆ ಹೆಚ್ಚು ಡೀಸೆಲ್ ಕಳುಹಿಸಿಕೊಡಲು ಕೋರುತ್ತೇವೆ ಮತ್ತು ಅಗತ್ಯ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಳೆ ಕಡಿಮೆಯಾಗುವುದು ಕೂಡ ಇದಕ್ಕೆ ಒಂದು ಕಾರಣವಾಗಿದೆ. ಆ ಕಾರಣಕ್ಕಾಗಿ ಸ್ವಲ್ಪ ಡೀಸೆಲ್ demand ಆಗಿದೆ. ಈಗಾಗಲೇ ಶೇಕಡ 25% ರಷ್ಟನ್ನು ಕಳುಹಿಸಿದ್ದಾರೆ. ನಿನ್ನೆ ಕಂಪನಿಯವರನ್ನು ಕರೆಸಿ ಅವರ ಹತ್ತಿರ ಮಾತನಾಡಿದ್ದೇವೆ. ಮಾಹಿತಿಯನ್ನು ಪಡೆದಿದ್ದೇವೆ. ಇವತ್ತು 40% ಕಳುಹಿಸಿಕೊಡುತ್ತೇವೆಂದು ಹೇಳಿದ್ದಾರೆ. ಕಳೆದ ವಾರ ಸಭೆ ಮಾಡಿ ಕರೆದಾಗ 23% ಜಾಸ್ತಿ ಮಾಡಿದ್ದೇವೆ. ಈಗ ಬೇಡಿಕೆ 50% ಇದೆ ಅಂತ ಹೇಳಿದಾಗ 40% ಮೊನ್ನೆವರೆಗೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇನ್ನು 2–3 ದಿವಸಗಳಲ್ಲಿ ಸರಿಹೋಗುತ್ತದೆ ಎಂದು ಕಂಪನಿಯವರು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಸಚಿವರಿಗೆ ಪತ್ರ ಬರೆಯುತ್ತಾರೆ. ನಮ್ಮ ಮುಖ್ಯ ಕಾರ್ಯದರ್ಶಿಗಳ ಮುಖಾಂತರ ಸರ್ಕಾರ ಏನೇನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ತಮಗೂ ಕೂಡ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ ; ನಮ್ಮ ಕರ್ನಾಟಕ ರಾಜ್ಯದಲ್ಲಿ ಡೀಸೆಲ್ ಮತ್ತು ಪೆಟ್ರೋಲ್ ಮೇಲೆ sales tax ಹೆಚ್ಚು ಇದೆ. ಅದಕ್ಕೆ ಏನು ಮಾಡಿದ್ದಾರೆಂದರೆ ಸಾಕಷ್ಟು ಜನ particularly ಗೋವಾ. ಮಹಾರಾಷ್ಟ್ರ. ಸೋಲಾಪುರ್. ತಮಿಳುನಾಡಿನಿಂದ ಡೀಸೆಲ್ ಹಾಕಿಕೊಂಡು ಬರುತ್ತಾರೆ. ಇಲ್ಲಿ ಏನಾಗುತ್ತದೆ ಎಂದರೆ ನಮ್ಮಲ್ಲಿ cinsymption ಕಡಿಮೆ ಇದೆ ಎಂದು ಹೇಳಿ ಕೋಟಾ ಅದನ್ನೇ ಚಿllotment ಮಾಡುತ್ತಾರೆ. ಇದು ಏನಾಗುತ್ತದೆ ಎಂದರೆ ಇಲ್ಲಿರುವ taxes compared ಣು ಟಿಜುಠ್ಛಳಠಣಡಿಟಿರ್ ಣಚಿಣಜ್ಞ ಹೆಚ್ಚು ಇದೆ. ಹೆಚ್ಚಿಗೆ ಇದ್ದ ಕಾರಣ ಅನೇಕ ಲಾಂಗ್ distance ನಿಂದ ನ್ಯಾಷನಲ್ ಹೈವೇ ಮೇಲೆ. ಸ್ಟೇಟ್ ಹೈವೇ ಮೇಲೆ good transport ಮಾಡಿಕೊಂಡು ಬರತಕ್ಕ ಲಾರಿಗಳು ಅವರೆಲ್ಲ ಕೂಡ ವಿಶೇಷವಾಗಿ ಬಾರ್ಡರ್‌ಗೆ ಬಂದ ತಕ್ಷಣ ಡೀಸೆಲ್‌ನ್ನು full ಮಾಡಿಕೊಂಡು ಇಲ್ಲಿ ಬಂದು ಬಿಡುತ್ತಾರೆ. Sm. naturally ಒಳಗೆ ಇರತಕ್ಕಂಥಹವರಿಗೆ ನಮ್ಮ ಟ್ರಾಕ್ಟರ್ ಹೆಚ್ಚಿಗೆ ಆಗಿರಬಹುದು. ಮತ್ತು ಲಾರಿಗಳು ಹೆಚ್ಚಿಗೆ ಆಗಿರಬಹುದು. ಡೀಸೆಲ್ ಗಾಡಿಗಳು. ಕಾರುಗಳು ಹೆಚ್ಚಾಗಿರಬಹುದು. So. ಇಲ್ಲಿ number ಹೆಚ್ಚಿಗೆ ಆಯಿತು. ಆದರೆ diesel quantity ಅಷ್ಟೆ consumption ಉಳಿಯಿತು. ಏತಕ್ಕಾಗಿ

ಉಳಿಯಿತೆಂದರೆ. ಎಲ್ಲಾ ಹೊರಗಿನವರು ಅಂದರೆ neighboring stateನವರು ತುಂಬಿಕೊಂಡು ಬರುವುದರಿಂದ ಆ ಒಂದು quantity ಆಯಿತು. ನಾಳೆ ದಿವಸ ಏನೆನ್ನುತ್ತಾರೆಂದರೆ ನಿಮ್ಮಲ್ಲಿ consumption ಉದಾಹರಣೆಗೆ ಹೇಳುವುದಾದರೆ 1 ಲಕ್ಷ ಲೀಟರ್ ಇತ್ತು ಅಥವಾ 10 ಲಕ್ಷ ಲೀಟರ್ 1 ಕೋಟಿ ಲೀಟರ್ ಇದೆ. ನಿಮ್ಮದು ಇಷ್ಟೆ ಇದೆ. ಅದಕ್ಕಾಗಿ ನಿಮಗೆ ಇಷ್ಟು allotment ಕೊಟ್ಟಿದ್ದೇವೆನ್ನುತ್ತಾರೆ. ಅದಕ್ಕಾಗಿ ಇದರ ಬಗ್ಗೆಯೂ ಕೂಡ ಚಿಂತನೆಯನ್ನು ಮಾಡುವಂತಹ ಅವಶ್ಯಕತೆ ಇದೆ. ಅದು ನಿಮ್ಮ ಕೈಯಲ್ಲಿ ಬಗೆಹರಿಯುವುದಿಲ್ಲ ಪಾಪ. ಮತ್ತೆ ತಾವು ಮಾನ್ಯ ಮುಖ್ಯಮಂತ್ರಿಗಳನ್ನೇ ಕೇಳಬೇಕಾಗುತ್ತದೆ. ನಿಮಗೂ ಮತ್ತು ಅವರಿಗೂ ಈಗ ಸ್ವಲ್ಪ ಚೆನ್ನಾಗಿದೆ. Naturally. ಈಗ ಅವರು ನೀವು ಹೇಳುವುದನ್ನು ಕೇಳುತ್ತಾರೆ. ಮೊದಲು ಕೇಳುತ್ತಿರಲಿಲ್ಲ. ಈಗ ಕೇಳುತ್ತಾರೆ. ಇದರೆ ಬಗ್ಗೆ ತಾವು ಏನಾದರೂ ಮಾಡಿ ಸ್ವಲà sales taxನ್ನು reduce ಮಾಡಿದರೆ Entry Tax ಅದು ಖಂಡಿತವಾಗಿಯೂ consumption ಕೂಡ ಜಾಸ್ತಿಯಾಗುತ್ತದೆ. ಟ್ಯಾಕ್ಸ್ ಕೂಡ ಜಾಸ್ತಿ ಬರುತ್ತದೆ.

ಅಧ್ಯಕ್ಷರು ; ಅದನ್ನು ರೆಡ್ಯೂಸ್ ಮಾಡಿದರೆ ಬೇರೆ ರಾಜ್ಯದ್ದು consumption ಜಾಸ್ತಿ ಬರುತ್ತದೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : No. No. ಎರಡೂ ಆಗುತ್ತದೆ. ಒಂದು ಅಲಾಟ್‌ಮೆಂಟ್ ಕೂಡ ಜಾಸ್ತಿಯಾಗುತ್ತದೆ. ಇನ್ನೊಂದು ಸೇಲ್ಸ್ ಟ್ಯಾಕ್ಸ್ ಕೂಡ ಜಾಸ್ತಿಯಾಗುತ್ತದೆ.

ಅಧ್ಯಕ್ಷರು : ಈಗ ಇದ್ದದ್ದನ್ನು ಅಲಾಟ್‌ಮೆಂಟ್ ಮಾಡಿಲ್ಲವಲ್ಲಾ? ಈಗ ಅಲಾಟ್‌ಮೆಂಟ್ ಇರುವುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ ; ಈಗ ಇರುವ ಅಲಾಟ್‌ಮೆಂಟ್ ಅವರಿಗೆ ಬಂದಿದೆ. ಆದರೆ ಅವರು ಏನು ಹೇಳುತ್ತಾರೆಂದರೆ vehicle ಜಾಸ್ತಿಯಾದ ಕಾರಣ ನಿಮ್ಮಲ್ಲಿ ಏನು ಕೋಟಾವನ್ನು ಕೊಡುತ್ತಾರೆ. ಆ ಕೋಟಾ ಕಡಿಮೆ ಬೀಳುತ್ತಿದೆ. ಹೌದಾ? ತಾವು ಹೇಳಿದ್ದು ಅದಕ್ಕಾಗಿ ಕೋಟಾ ಹೆಚ್ಚಿಗೆ ಬೇಕೆಂದರೆ ತಾವು ಎರಡನ್ನು ಮಾಡಬೇಕು. Consumption ಹೆಚ್ಚಿಗೆ ಇದ್ದಾಗ ಕೋಟಾವೂ ಕೂಡ ಹೆಚ್ಚಿಗೆ ಬರುತ್ತದೆ. ಅದಕ್ಕೆ ಈಗ ಏನಾಗಿದೆ ಎಂದರೆ, ಇಲ್ಲಿ consumption ಹೆಚ್ಚಿಗೆ ಇದೆ. ಕೋಟಾ ಏತಕ್ಕಾಗಿ ಕಡಿಮೆ ಇದೆ ಎಂದರೆ sales tax ಇರುವುದರಿಂದ ಅಕ್ಕಪಕ್ಕದಲ್ಲಿ ತೆಗೆದುಕೊಂಡು ಇಲ್ಲಿಗೆ ಬಂದು ಬಿಡುತ್ತಾರೆ. ದಯವಿಟ್ಟು ಇದರ ಬಗ್ಗೆಯೂ ಕೂಡ ತಾವು ಗಮನಹರಿಸಬೇಕು.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು : ಮಾನ್ಯ ಧ್ರುವನಾರಾಯಣ್‌ರವರೆ, ಶೂನ್ಯ ವೇಳೆಯಲ್ಲಿ ಯಾರು ಕೇಳಿದ್ದಾರೋ ಅವರಿಗಷ್ಟೆ ಮಾತ್ರ ಉತ್ತರವನ್ನು ಕೊಡುತ್ತಾರೆ. ಇದು ಶೂನ್ಯವೇಳೆಯಾಗಿರುವುದರಿಂದ ತಾವು ಕೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ಆರ್. ಧ್ರುವನಾರಾಯಣ ; ನನ್ನ ಹತ್ತಿರ ಈ ಬಗ್ಗೆ ಒಳ್ಳೆಯ ಮಾಹಿತಿ ಇದೆ. ದಯಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ಒಂದು ಸೆಕೆಂಡ್ ಅವಕಾಶವನ್ನು ಕೊಡಿ.

ಅಧ್ಯಕ್ಷರು ; ಇರಲಿ. ತಾವು ಅದನ್ನು ಕಳುಹಿಸಿಕೊಡಿ. ಶೂನ್ಯ ವೇಳೆಯಲ್ಲಿ ಯಾರು ಕೇಳಿದ್ದಾರೆ. ಅವರಿಗೆ ಮಾತ್ರ ನಾನು ಅವಕಾಶವನ್ನು ಕೊಡುತ್ತೇನೆ. ಮತ್ತೆ ಎಲ್ಲರೂ ಮಾತನಾಡುವುದಾದರೆ ಅದಕ್ಕೆ ಏನೂ ಅರ್ಥವಿಲ್ಲ. ತಾವು ಅದನ್ನು ಕಳುಹಿಸಿಕೊಡಿ.

ಶ್ರೀ ಹೆಚ್. ಹಾಲಪ್ಪ : ಹೆಚ್ಚಿಗೆ ಬಂದರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಪೆಟ್ರೋಲ್ ಮತ್ತು ಡೀಸೆಲ್ ಜಾಸ್ತಿ ಬಂದು ಖರ್ಚಾದರೆ ನಮಗೆ ದುಡ್ಡು ಬರುತ್ತದೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಮಾನ್ಯ ಸದಸ್ಯರಾದ ಶ್ರೀ ಧ್ರುವನಾರಾಯಣ್‌ರವರು ಪೆಟ್ರೋಲ್ ಬಂಕ್‌ನ್ನು ನಡೆಸುತ್ತಿದ್ದಾರೆ. ಅದರಿಂದಾಗಿ ಅವರಿಗೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು ; ತಾವು ಅದನ್ನು ಕಳುಹಿಸಿಕೊಡಿ.

ಶ್ರೀ ಆರ್.ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೆ. ಪಕ್ಕದ ರಾಜ್ಯಗಳಲ್ಲಿ ಇದರ ಬೆಲೆಗಳು ಹೇಗಿದೆ ಎಂದು. ನಮ್ಮ ರಾಜ್ಯಕ್ಕೂ ಮತ್ತು ಪಕ್ಕದ ರಾಜ್ಯಕ್ಕೂ ಏನು difference ಇದೆ ಎನ್ನುವುದನ್ನು ಮಾತ್ರ ನಾನು ಹೇಳುತ್ತೇನೆ. Entry Tax ಏನಿದೆ. Entry Tax 1 ಸಾವಿರ ಲೀಟರ್‌ಗೆ 2137 ರೂಪಾಯಿ ಮಾತ್ರ ನಮ್ಮ ರಾಜ್ಯದಲ್ಲಿ ಮಾತ್ರ ಹಾಕುತ್ತಿದ್ದಾರೆ. ಬೇರೆ ಯಾವ ರಾಜ್ಯದಲ್ಲಿಯೂ ಕೂಡ Entry Tax ನ್ನು ಹಾಕುತ್ತಿಲ್ಲ. Sales Tax ಕೂಡ ಬೇರೆ ರಾಜ್ಯಗಳಿಗೆ compare ಮಾಡಿದಾಗ ನಮ್ಮದು ಸ್ವಲ್ಪ ಹೆಚ್ಚಿಗೆ ಇದೆ. ಹಾಗಾಗಿ ರೇಟ್ ಏನಾಗಿದೆ ಎಂದರೆ. ಈಗ ಪೆಟ್ರೋಲ್ 57.17 ಪೈಸೆ ನಮ್ಮ ಬೆಂಗಳೂರಿನಲ್ಲಿದೆ. ನೀವು ಅದನ್ನೇ ಚೆನ್ನೈನಲ್ಲಿ ತೆಗೆದುಕೊಂಡರೆ 55 ರೂಪಾಯಿಗಳು ಇದೆ. ಕಾರಣ ಅಲ್ಲಿ ಹಾರ್‌ಬರ್‌ನಲ್ಲಿ Stock ಇರುವಂತಹದ್ದು.

ಅಧ್ಯಕ್ಷರು ; ಅದರ ಬಗ್ಗೆ ನಿಮ್ಮ suggestionನ್ನು ಹೇಳಿ. Rate ಹೆಚ್ಚು

ಕಡಿಮೆ ಇರುವುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಒಪ್ಪಿಕೊಂಡಿದ್ದಾರೆ. ಈ ಬಗ್ಗೆ ನಿಮ್ಮ ಸಲಹೆ ಏನು?

ಶ್ರೀ ಆರ್.ಧ್ರುವನಾರಾಯಣ್ : Entry Tax ಏನಿದೆ. ಬೇರೆ ಯಾವ ರಾಜ್ಯದಲ್ಲೂ ಕೂಡ Entry Taxನ್ನು ಹಾಕುವುದಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ Entry Tax ನ್ನು ಹಾಕುತ್ತಿದ್ದಾರೆ. ಅದನ್ನು ತಾವು exempt ಮಾಡಿದರೆ ಎಲ್ಲಾ ರಾಜ್ಯದಲ್ಲಿಯೂ ಕೂಡ ಒಂದೇ ತರಹ ಇರುತ್ತದೆ.

ಶ್ರೀ ಹೆಚ್ ಹಾಲಪ್ಪ : Tax ಕಡಿಮೆ ಮಾಡುವ ಬಗ್ಗೆ ನಮ್ಮ ಮುಖ್ಯಮಂತ್ರಿಗಳನ್ನು ಕೇಳದೆಯೇ ಈಗ ಒಂದು ರೂಪಾಯಿ ನಾವು ಕಡಿಮೆ ಮಾಡಿದ್ದೇವೆ. ಮುಂಚೆ ಜಾಸ್ತಿ ಇತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಒಂದು ರೂಪಾಯಿಯನ್ನು ಕಡಿಮೆ ಮಾಡಿದ್ದೇವೆ.

ಅಧ್ಯಕ್ಷರು ; ಆಯಿತು. ಮಾನ್ಯ ಕರುಣಾಕರ ರೆಡ್ಡಿಯವರೆ. ಕಂದಾಯ ಮಂತ್ರಿಗಳು ಬರಗಾಲದ ಬಗ್ಗೆ ತಾವು ಉತ್ತರವನ್ನು ಕೊಡುತ್ತೀರಾ?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಮಂತ್ರಿಗಳು) ; ಮಾನ್ಯ ಅಧ್ಯಕ್ಷರೆ. ಬರಗಾಲದ ಬಗ್ಗೆ ನಿನ್ನೆ cabinet meeting ನಲ್ಲಿ ಈ ಬಗ್ಗೆ ವಿಸ್ತೃತವಾಗಿ ಚರ್ಚೆಯಾಗಿ. ಸನ್ಮಾನ್ಯ ಮುಖ್ಯಮಂತ್ರಿಗಳು ಕ್ಯಾಬಿನೆಟ್ ಸಬ್ ಕಮಿಟಿಯನ್ನು ರಚನೆ ಮಾಡಿದ್ದಾರೆ. ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳ ಒಂದು ಮೀಟಿಂಗ್‌ನ್ನು ಆಗಸ್ಟ್ 2ನೇ ತಾರೀಖಿನ ದಿವಸ ಕರೆದು ಎಲ್ಲಾ ಮಾಹಿತಿಗಳನ್ನು ತೆಗೆದುಕೊಂಡು ಬರಗಾಲದ ಬಗ್ಗೆ ಏನು ಮಾಡಬೇಕೆಂದು ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ನಿರ್ಧಾರವನ್ನು ನಾವು ಬರುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ ; ಇವರು ಹೇಳುವುದನ್ನು ಕೇಳಿ ನಾವು ಸುಮ್ಮನೆ ಕೂರುವುದಕ್ಕಾಗುವುದಿಲ್ಲ. ನಾನು ಏನು ಕೇಳಿರುವುದೇನೆ. 6 ಜಿಲ್ಲೆಯನ್ನು ನೀವು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿದರೆ. ಸುಮಾರು 37 ತಾಲ್ಲೂಕುಗಳಲ್ಲಿ ಇವತ್ತಿನ ದಿವಸ ನೀರಿನ ಕೊರತೆ ಇದೆ. ಇದಕ್ಕಾಗಿ ತಾವು ಹಣವನ್ನು ಎಷ್ಟು ಬಿಡುಗಡೆ ಮಾಡುತ್ತೀರಿ. ಎಲ್ಲೆಲ್ಲಿ ತೊಂದರೆ ಇದೆ ಎಂದು ನಾವು ಕೇಳುತ್ತಿರುವುದು. ನೀವು sub-committee ಯನ್ನು ಮಾಡಿಕೊಂಡಿರಬಹುದು. ಅದು ನಿಮ್ಮ administrative matter. But ಈ ಜಿಲ್ಲೆಗಳಲ್ಲಿ. ತಾಲ್ಲೂಕುಗಳಲ್ಲಿ ಏನು relief

11-2008

ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀರಿ. ನಿಮ್ಮಲ್ಲಿ Natural Calamity Fundನಲ್ಲಿ ಎಷ್ಟು ಹಣವಿದೆ. ಅಥವಾ ನಿಮ್ಮ Consolidated Fund ಅಥವಾ Chief Minister Fundನಲ್ಲಿ ಏನಾದರೂ ಹಣವಿದ್ದರೆ ಅದು ಬಿಡುಗಡೆ ಮಾಡುತ್ತೀರಾ? ಏನು ಅನ್ನುವುದು ಗೊತ್ತಾಗಬೇಕಲ್ಲವೇ. ಇದರ ಬಗ್ಗೆ ತಾವು ಘೋಷಣೆಯನ್ನು ಮಾಡಬೇಕು. ಅದಕ್ಕಾಗಿ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಏಕೆಂದರೆ. Finance Minister ಅವರೇ ಆಗಿದ್ದಾರೆ. Deputy Commissioner ರವರನ್ನು control ಮಾಡುವವರು ಅವರೇ ಆಗಿದ್ದಾರೆ. ಪಾಪ. ಮಾನ್ಯ ಸಚಿವರಾದ ಶ್ರೀ ಕರುಣಾಕರರೆಡ್ಡಿಯವರು ಏನು ಮಾಡುತ್ತಾರೆ. ನಮ್ಮ ಹಾಲಪ್ಪನವರು ಹಾಗೂ ರೆಡ್ಡಿಯವರು ಇವರು ಎಷ್ಟು ಹೇಳುತ್ತಾರೆ. ಅಷ್ಟನ್ನು ಅವರು ಕೇಳುತ್ತಾರೆ. ಎಲ್ಲವನ್ನೂ ಇವರ ಹತ್ತಿರ ಇಟ್ಟುಕೊಂಡು ನೀವು ಓಡು ಓಡು ಎಂದರೆ ಅವರು ಏನು ಮಾಡುತ್ತಾರೆ? ಪಾಪಾ. ಅವರು ಓಡುತ್ತಾರೆಯೇ? ನೀವು ಏನು ಮಾಡುತ್ತೀರೆಂದು ಸ್ಪಷ್ಟವಾಗಿ ಹೇಳಿದರೆ ರಾಜ್ಯಕ್ಕೆ ಜನರಿಗೆ ಗೊತ್ತಾಗುತ್ತದೆ.

ಅಧ್ಯಕ್ಷರು ; ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಏನಾದರೂ ಉತ್ತರವನ್ನು ಕೊಡುತ್ತೀರಾ? ಮಾನ್ಯ ಕರುಣಾಕರರೆಡ್ಡಿಯವರೆ ಏನೇನು ಆಗಿದೆ ಎಂದು ತಾವು ಕೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ ; ಇಲ್ಲಾ, ಅವರು ಹೇಳಲಿಲ್ಲವೆಂದರೆ ನಾವು 4 ವಿಷಯ ಸಂಬಂಧಪಟ್ಟಂತಹ general ಆಗಿ ಈ ರಾಜ್ಯದ ಜನತೆಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ನಾವು ರೈಸ್ ಮಾಡಿರುವುದು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಂದಿಸಬೇಕೆಂಬ ದೃಷ್ಟಿಯಿಂದ ನಾವು ರೈಸ್ ಮಾಡಿರುವುದು. ನಾವೇನು ಅವರಿಂದ ಉತ್ತರ ಬಯಸಿ. ಇವರಿಂದ ಉತ್ತರ ಬಯಸಿ ಕೇಳಿಕೊಳ್ಳಬೇಕೆಂದು ಅಲ್ಲ. ಸಂಬಂಧಪಟ್ಟ ವಿಷಯಗಳ ಬಗ್ಗೆ ಅವರು ಹೇಳಿದ್ದಾರೆ. ಆದರೆ ಈ ಬಗ್ಗೆ ನಮಗೆ ಗೊತ್ತಾಗಬೇಕಲ್ಲವೇ? ಹಣ ಎಷ್ಟು ಬಿಡುಗಡೆ ಮಾಡುತ್ತಾರೆಂದು ಹೇಳಿಲ್ಲ. ಯಾವ ತಾಲ್ಲೂಕುಗಳನ್ನು declare ಮಾಡಿಕೊಂಡಿದ್ದಾರೆ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಲ್ಲವೇ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) ; ಮಾನ್ಯ ಪ್ರತಿಪಕ್ಷದ ನಾಯಕರು ಬಹಳ ಗಂಭೀರವಾದಂತಹ ವಿಷಯವನ್ನು ರಾಜ್ಯದ ಜನತೆಗೆ ಹಾಗೂ ರೈತರಿಗೆ ಸಂಬಂಧಪಟ್ಟಂತಹ ವಿಚಾರವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ನಾಳೆ ಅಥವಾ ನಾಡಿದ್ದು ನಾವು ಇನ್ನು ದೇವರ ಮೇಲೆ ನಂಬಿಕೆಯನ್ನು

ಇಟ್ಟುಕೊಂಡಿರುವಂತಹ ಜನರಾಗಿದ್ದೇವೆ. ಕಳೆದ ಎರಡು ದಿವಸಗಳಿಂದ ಮಳೆಯಾಗಿದೆ. ನಾಳೆ ನಾಡಿದ್ದು ಪರಿಸ್ಥಿತಿಯನ್ನು ನೋಡಿಕೊಂಡು ರಾಜ್ಯದಲ್ಲಿ ವಾಸ್ತವಿಕವಾದಂತಹ ಸ್ಥಿತಿಗತಿಯನ್ನು ನೋಡಿಕೊಂಡು ಯಾವ ಯಾವ ತಾಲ್ಲೂಕುಗಳಲ್ಲಿ ಏನೇನು ಪರಿಸ್ಥಿತಿಗಳು ಇದೆ. ಕೇಂದ್ರಕ್ಕೆ ನಾವು ಯಾವ ರೀತಿಯಾಗಿ ಮನವಿಯನ್ನು ಸಲ್ಲಿಸಬೇಕು. ರಾಜ್ಯ ಸರ್ಕಾರವು ಏನು ಕೃಷಿ ಕಾರ್ಮಿಕರಿಗೆ ಉದ್ಯೋಗವನ್ನು ಕೊಡುವ ಬಗ್ಗೆ ರೈತರಿಗೆ ಯಾವ ರೀತಿಯಾಗಿ ನೆರವಿಗೆ ಏನೇನು ಮಾಡಬೇಕೆಂಬುದರ ಬಗ್ಗೆ. ಎಲ್ಲಾ ಸಮಗ್ರವಾದಂತಹ ಒಂದು STATEMENT ಇಲ್ಲಿ ಮಾಡುತ್ತೇವೆ. ಇನ್ನೆರಡು ದಿವಸ WAIT ಮಾಡಿ ನಾನು ಮುಂದಿನ ಬಜೆಟ್ ಬಗ್ಗೆ REPLY ಮಾಡುವುದಕ್ಕಿಂತ ಇದು ಬಹಳ ಮುಖ್ಯವಾದುದು. ಇದನ್ನು SEPARATE ಆಗಿ ಪ್ರತಿಪಕ್ಷದ ನಾಯಕರು ಹೇಳುವುದು ಸರಿ ಇದೆ. ಅದು ರಸಗೊಬ್ಬರದ ಬಗ್ಗೆ ಇರಬಹುದು. ಡೀಸೆಲ್ ಅಭಾವದ ಬಗ್ಗೆ ಇರಬಹುದು. ಬರಗಾಲದ ಪರಿಸ್ಥಿತಿ ಬಂದಿದೆ. ನಾನು ನಿನ್ನೆ ರಾತ್ರಿ ಒಂದು ಗಂಟೆಯಲ್ಲಿ ಎಲ್ಲಾ DEPUTY COMMISSIONER ರವರಿಗೆ PHONE ಮಾಡಿದ್ದೇನೆ. ಬೆಳಿಗ್ಗೆ 5 ಗಂಟೆಯಲ್ಲಿ ಎದ್ದು ಕುಳಿತುಕೊಂಡು ಎಲ್ಲಾ ಅಧಿಕಾರಿಗಳ ಸಂಪರ್ಕ ಮಾಡಿ ಮಳೆಯಾಗಿರುವುದರಿಂದ ಒಂದು ಸ್ವಲ್ಪ ಉಸಿರಾಡುವಂತಹ ಪರಿಸ್ಥಿತಿ ಕೆಲವು ಭಾಗದಲ್ಲಿ ಆಗಿದೆ. ಇವೆಲ್ಲವನ್ನು ನೋಡಿಕೊಂಡು ದಯಮಾಡಿ ಸಹಕಾರವನ್ನು ಕೊಡಬೇಕು. ಇನ್ನು ಎರಡು ದಿವಸಗಳಲ್ಲಿ ಸಮಗ್ರವಾದಂತಹ ಒಂದು STATEMENTನ್ನು ಮಾಡುತ್ತೇವೆ. ಅದು ನಮ್ಮ ಕರ್ತವ್ಯವೂ ಇದೆ. ಇದರಲ್ಲಿ ಯಾವುದನ್ನು ಮುಚ್ಚಿಡುವಂತಹ ಪ್ರಶ್ನೆ ಇಲ್ಲ. ಎಲ್ಲಾ ವಿವರವಾದ ಮಾಹಿತಿಯನ್ನು ಈ ಸದನಕ್ಕೆ ನಾನು ಕೊಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ ; ನಾನು ಎಲ್ಲಾ ಕಡೆಯ ಬಗ್ಗೆ ಕೇಳಲಿಲ್ಲ. ಈಗಾಗಲೇ ಎಲ್ಲಿ 86% ಕೊರತೆ ಇದೆ ಬಿಜಾಪುರ DISTRICTನಲ್ಲಿ. ರಾಯಚೂರಿನಲ್ಲಿ 81% ಮೈನಸ್ ಇದೆ. ಬಾಗಲಕೋಟೆ 67% ಮೈನಸ್ ಇದೆ. ಗುಲ್ಬರ್ಗಾ 66% ಇದೆ. ಕೊಪ್ಪಳ 62% ಇದೆ. ಬಳ್ಳಾರಿ 61 ಮೈನಸ್ ಇದೆ. ಅಂದರೆ ವಾಡಿಕೆಗಿಂತಲೂ MORE THAN 50% ಈಗ ಮಳೆ ಬಂದರೂ ಕೂಡ ಸುಧಾರಣೆಯಾಗುವಂತಹ ಪ್ರಶ್ನೆಯೇ ಇಲ್ಲ. IT HAS ALERADY CROSSED MORE THAN 50%. ಅದಕ್ಕೆ ಈಗ ALREADY ಏನಾಗಿದೆ ಎಂದರೆ. ಮುಂಗಾರು ಬೆಳೆ ಹೋಯಿತು. ಅದಕ್ಕಾಗಿ ಇವರಿಗಾದರೂ ಮಾಡಬೇಕಲ್ಲವೇ? ಬೇರೆ ಕಡೆ ಮಾಡುವುದನ್ನು ಬಿಡಿ. ಬೇರೆ ಕಡೆ ನೀವು ನೋಡಿಕೊಂಡು NATURALLY ವಿಶೇಷವಾಗಿ ಎಲ್ಲಾ ಕಡೆಗಳಲ್ಲಿ ಮಳೆ ಬರಬೇಕು. ನಿಸರ್ಗದ ದಯೆ ಮತ್ತು ಕೃಪೆ ನಮ್ಮ ಮೇಲೆ ಇರಲಿ ಎಂದು

ಹೇಳಿ ನಾನು ಕುಳಿತುಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಎಷ್ಟೇ ದೇವರ ಪ್ರಭಾವ ಇಲ್ಲಿ ಬೀರಿದರೂ ಕೂಡ ಏನಾಗುತ್ತದೆಂದರೆ ಈ ಆರು ಜಿಲ್ಲೆಗಳಲ್ಲಿ ಸುಧಾರಣೆಯಾಗುವುದು ಕಷ್ಟ. ಮತ್ತೆ ರಬಿಗೆ ಏನಾದರೂ ಆಗಬೇಕೇ ಹೊರತಾಗಿ ಖಾರೀಫ್‌ದು ಹೋಯಿತು. ಇದು ನಿಸರ್ಗ ನಿಯಮ. ಆ ನಿಯಮದ ಪ್ರಕಾರವೇ ಮಳೆ ಬಂದರೆ ತಾನೇ ಬೆಳೆ ಆಗುವುದು. ಹರಕೆ ಮಾಡುವುದರಿಂದ ಮಕ್ಕಳು ಹುಟ್ಟುವುದೇ ಮಾನ್ಯ ಅಧ್ಯಕ್ಷರೇ. ಅದಕ್ಕೆ ಅದು ಬೇಡ. Atleast ಕೊರತೆ ಇರುವಂತಹ ಈ ಆರು ಜಿಲ್ಲೆಗಳಿಗಾದರೂ ಏನಾದರೂ ಅವರು ಮಾಡಲಿ. ಕೊಡುತ್ತೇವೆನ್ನುವಂಥದ್ದು. ತಾಲ್ಲೂಕುಗಳಲ್ಲಿ ಕೊರತೆ ಇದೆ. ಅದರ ಬಗ್ಗೆ ನಾನು ಕೇಳುತ್ತಿಲ್ಲ. ಅಲ್ಲಿ ಸ್ವಲ್ಪ ಕೊರತೆ ಇದೆ. ಇವು more than 86% ಹೋಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ. Zero hourನಲ್ಲಿ ಬಹಳ ಪ್ರಮುಖವಾದಂತಹ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ಮನೆಯಲ್ಲಿರತಕ್ಕಂಥ ಎಲ್ಲರಿಗೂ ಕಳಕಳಿ ಇರುವಂತಹ ಬಹಳ ಗಂಭೀರವಾದ ವಿಷಯವದು. ಈ ಬಗ್ಗೆ ಸೋಮವಾರ ವಿವರವಾದಂತಹ statementವೊಂದನ್ನು ನಾನು ಮಾಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ. ಒಂದು ನಿಮಿಷ.

ಅಧ್ಯಕ್ಷರು :– ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಈ ಬಗÉÎ statement ಮಾಡುತ್ತೇನೆಂದು ಹೇಳಿದ್ದಾರೆ. No. I will not allow you. ನೀವು ಯಾವುದೇ ವಿಷಯದ ಮೇಲೆ ಶೂನ್ಯ ವೇಳೆಯಲ್ಲಿ ಮಾತನಾಡುವುದಿದ್ದರೆ. ನನಗೆ ನೋಟಿಸ್ ಕೊಡಿ. ಹಾಗೆಯೇ ಏಕಾಏಕಿ ಎದ್ದು ನಿಂತು ಮಾತನಾಡಲು ಅವಕಾಶ ಕೇಳುವುದು ಸರಿಯಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ ;– ಮಾನ್ಯ ಅಧ್ಯಕ್ಷರೆ. ಈಗಾಗಲೇ ರಸಗೊಬ್ಬರದ ಬಗ್ಗೆ ಚರ್ಚೆ ಮಾಡಲಾಗಿದೆ. ತುಮಕೂರಿನಲ್ಲಿ ನಿನ್ನೆ ದಿವಸ ಗಾಳಿಯಲ್ಲಿ ರಬ್ಬರ್ ಗುಂಡು ಹೊಡೆದಿದ್ದಾರೆ. ಬೇರೆ ಗುಂಡು ಹೊಡೆದಿದ್ದರೆ ಅಲ್ಲಿ ಬೇರೆ ರೀತಿಯಾಗಿ ಆಗುತ್ತಿತ್ತು. ಪುನಃ ಹಳೆಯದೆಲ್ಲಾ ಮರುಕಳಿಸುತ್ತಿತ್ತು. ನನ್ನ ಕ್ಷೇತ್ರದಲ್ಲೂ ಕೂಡ 100 ಟನ್ ಗೊಬ್ಬರದ ಕೊರತೆ ಇದೆ. ಕರ್ನಾಟಕ ಸಹಕಾರ ಮಾರಾಟ ಮಂಡಳಿಯವರು ನಮಗೆ ದುಡ್ಡು ಕೊಟ್ಟರೆ. ನಾವು ತರಿಸಿಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ತಮ್ಮ ಮುಖಾಂತರ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಆ ಪತ್ರವನ್ನು ಕೂಡ ರವಾನೆ ಮಾಡಿದ್ದೇನೆ. ಆದಷ್ಟು ಬೇಗನೆ ಅದಕ್ಕೆ ವ್ಯವಸ್ಥೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು. ಏಕೆಂದರೆ. ಈಗ ಬಿಟ್ಟರೆ ಮತ್ತೆ ನಮಗೆ ಗೊಬ್ಬರದ ಅವಶ್ಯಕತೆ

ಇರುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಈಗ 3–4 ದಿವಸಗಳು ಮಾತ್ರ ಗೊಬ್ಬರದ ಅವಶ್ಯಕತೆ ಇದೆ. ದಯಮಾಡಿ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದಂತಹ ಉತ್ತರವನ್ನು ನೀಡಬೇಕು.

ಶ್ರೀ ಸಿ.ಎಸ್. ಪುಟ್ಟೇಗೌಡ :– ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು ; ಈಗಾಗಲೇ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಪುಟ್ಟೇಗೌಡರೆ. ಮತ್ತೆ ಅದರ ಬಗ್ಗೆ ಮಾತನಾಡುವುದು ಬೇಡ. ನೀವು ಸ್ವಲ್ಪ ಲೇಟ್ ಆಗಿ ಬಂದಿರಿ. ನೀವು ಬರುವ ಮುಂಚೆ ಅದರ ಬಗ್ಗೆ ಸಾಕಷ್ಟು discussion ಆಗಿದೆ.

ಶ್ರೀ ಸಿ.ಎಸ್. ಪುಟ್ಟೇಗೌಡ :– ಗೊಬ್ಬರದ ಗಲಾಟೆಯಿಂದಾಗಿ ನಾವು ಶಾಸನ ಸಭೆಗೆ ಬರಲಿಕ್ಕಾಗಲಿಲ್ಲ.

ಅಧ್ಯಕ್ಷರು :– ಮಾನ್ಯ ಬಾಲಕೃಷ್ಣರವರೆ. ನಿಮಗೂ ಸಹ ಈಗಾಗಲೇ ಉತ್ತರ ಸಿಕ್ಕಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ ;– ನಮಗೆ ಈಗ urgent ಆಗಿ 100 ಟನ್ ಗೊಬ್ಬರ ಬೇಕಾಗಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ :– ಏಪ್ರಿಲ್‌ನಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದ ದಿವಸದಿಂದಲೂ ರಸಗೊಬ್ಬರದ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ. ಈಗ ರಾಜ್ಯದಲ್ಲಿ ಆ ಬಗ್ಗೆ ಗಲಾಟೆಗಳು ನಡೆಯುತ್ತಿವೆ. ಮಾನ್ಯ ಮುಖ್ಯಮಂತ್ರಿಗಳಿಗೆ federation ನಿಂದ...

ಅಧ್ಯಕ್ಷರು ;– ಆ ಬಗ್ಗೆ ಚರ್ಚೆಯಾಗಿದೆ. ಅದರ ಬಗ್ಗೆ ಉತ್ತರವನ್ನು ಸಹ ಅವರು ಹೇಳಿದ್ದಾರೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ ;– ನಮಗೆ 500 ಕೋಟಿ ರೂ.ಗಳ draft ಕೊಡುತ್ತೇನೆಂದು ಅಂದು ಹೇಳಿದ್ದರು. ಈಗ federation ನವರು ನಮಗೆ ದುಡ್ಡು ಕೊಟ್ಟರೆ. ತರಿಸಿಕೊಡುತ್ತೇವೆಂದು ಹೇಳಿದ್ದಾರೆ.....

ಅಧ್ಯಕ್ಷರು ;– ಈಗಾಗಲೇ ಮಾನ್ಯ ಬಾಲಕೃಷ್ಣರವರು ನೀವು ಬರುವುದಕ್ಕಿಂತ ಮುಂಚೆ ಆ ಬಗ್ಗೆ refer ಮಾಡಿದರು. ಅದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ ;– ನಾಳೆ ಹೆಚ್ಚು ಕಡಿಮೆಯಾದರೆ, ಬೇರೆ ಬೇರೆ ರೀತಿಯ ಅರ್ಥ ಬರುತ್ತದೆ.

ಅಧ್ಯಕ್ಷರು :– ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಮತ್ತೆ ಮತ್ತೆ ಅದನ್ನೇ repeat ಮಾಡಬೇಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ರೈತರು ಅಲ್ಲಿ ಪ್ರತಿನಿತ್ಯ ಧರಣಿ ಮಾಡುತ್ತಿದ್ದಾರೆ.

